**1. Title and Commencement:** (1) These rules may be called the Karnataka Shops and Commercial Establishments (Amendment) Rules, 2007.

(2) They shall come into force from the date of their publication in the Official Gazette.

**2. Amendment of Form-S:** In Form-S prescribed under Rules 24B(2) of the Karnataka Shops and Commercial Establishments Rules, 1963,-

(i) after condition 7, the following new conditions shall be inserted, namely:-

``(8) The Company shall obtain bio-data of each driver and conduct pre-employment screening of the antecedents of all drivers employed on their own. As regards the drivers employed through out sourcing, the Company shall ensure to its satisfaction that the collection of bio-data and pre-employment screening of the antecedents of the drivers is carried out by the service provider.

``(9) The schedule of route of the pick up and drop shall be decided by the supervisory office of the company only. In case of exigencies, change of drivers/routes/shifts shall be allowed only with the prior knowledge of supervisory officers/employees.

(10) The telephone number, particularly Mobile Phone numbers and addresses of the women employees shall not be disclosed to unauthorized persons.

(11) Careful selection of routes shall be made in such a way that ordinarily no women employees shall be picked up first and dropped last.

(12) The company shall provide security guards at work place and for night shift vehicles when women employees are being picked up first or dropped last.

(13) The designated supervisors of the company/service providers may randomly check the vehicles on various routes as far as possible.

(14) Company shall have a control room/travel desk for monitoring vehicle movements.''

(ii) condition 8, shall be renumbered as condition 15.

By Order and in the name of the Governor of Karnataka,

**VIMALA KUMARI**

P.R. 302

Under Secretary to Government
Labour Department.

**COMMERCE AND INDUSTRIES SECRETARIAT**

**NOTIFICATION**

**NO.CI 164 MMM 2006. Bangalore, Dated 12$^{TH}$ March 2007.**

In exercise of the powers conferred by Section 3 of the Commission of Inquiry act, 1952 (Central Act 60 of 1952), the Government of Karnataka have appointed Mr. U.L. Bhat, former Chief Justice of Gauhati and Madhya Pradesh High Court to be the Commission of Inquiry to inquire into various alleged illegalities, irregularities, events, issues and executive and other decisions, set out in clauses (a) to (f) and assess the quantum of losses to the Government and to suggest remedial measurers to undo such irregularities and illegalities, apart from other things mentioned in Government Notification No. CI 164 MMM 2006 dated 22.07.2006 published in the Karnataka Gazette Extraordinary No. 918, dated 22.07.2006 read with Corrigendum of even number, dated 24.07.2006 published in the Karnataka Gazette Extra-ordinary No.929 dated 24.07.2006. The Commission was required to submit its interim report within 2 months and the final report within 6 months from the date of Notification.

Whereas approval was given for extension of the time to give the interim report by four more months in Governmetn Letter No. CI 164 MMM 2006 dated 26.10.2006.

Whereas, the opposition parties and the persons who have complained about the irregularities and illegalities in the mining field refused to participate in the proceedings of the Commission and boycotted the Commission, which resulted in the Commission being unable to function effectively.

Whereas, the Commission was not able to submit its interim report even after $7^{1/2}$ months.

Whereas Justice U.L. Bhat, vide his letter Nl. ULBC/INQ/33/2007 dated 07.03.2007 has informed the Government that he would cease to attend to the work of the Commission from 08.03.2007.

Whereas under the aforementioned circumstances, the Government is of the opinion that the continued, existence of the commission is unnecessary and the Government has decided that it is prudent to refer all the matters set out in clauses (a) to (f) of the Government Notification No. CI 164: MMM 2006 dated 22.7.2006 to Lokayukta.

Now, therefore, in exercise of the powers conferred under Clause 9a) of sub-section (1) of Section 7 of the Commission of the Inquiry Act, 1952 (Central Act 60 of the 1952), the Government of Karnataka is of the opinion that the continued existence of the Justice U.L. Bhat Commission is unnecessary and therefore hereby declare that the said Commission shall cease to exist with immediate effect.

By Order and in the name of the Governor of Karnataka,

**K. JAYACHANDRA**

P.R. 303

Under Secretary to Government (Mines)
Commerce and Industries Department.

## ಸಹಕಾರ ಸಚಿವಾಲಯ

**ಅಧಿಸೂಚನೆ**

**ಸಂಖ್ಯೆ: ಸಿಒ 382 ಸಿಎಸ್ಎಸ್ 2006, ಬೆಂಗಳೂರು, ದಿನಾಂಕ: 2ನೇ ಫೆಬ್ರವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕಿನ ಬಿಳಕಿ ಮತ್ತು ಸಿಂಗನಮನೆ ವ್ಯವಸಾಯ ಸೇವಾ ಸಹಕಾರ ಸೇವಾ ಸಹಕಾರ ಸಂಘಗಳ** ಆಡಳಿತ ಮಂಡಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

**ಬೆಳಕಿ ವ್ಯವಸಾಯ ಸೇವಾ ಸಹಕಾರ ಸಂಘ ನಿ., ಭದ್ರಾವತಿ ತಾಲ್ಲೂಕು**

1. ಶ್ರೀ ಹಾಲೇಶಪ್ಪ ಬಿನ್ ನವಲಪ್ಪ, ಬಿಳಕಿ, ಕವಲಗುಂದಿ ಅಂಚೆ, ಭದ್ರಾವತಿ ತಾಲ್ಲೂಕು
2. ಶ್ರೀ ರಾಮಾನಾಯ್ಕ ಬಿನ್ ಹನುಮಾ ನಾಯ್ಕ, ಪದ್ಮೇನಹಳ್ಳಿ, ಶೆಟ್ಟಿಹಳ್ಳಿ ಅಂಚೆ, ಭದ್ರಾವತಿ ತಾಲ್ಲೂಕು
3. ಶ್ರೀಮತಿ ನಾಜಿಮಾ ಭಾನು ಕೋಂ ಫಾರೂಕ್, ದಣಬಗಟ್ಟ ಅಂಚೆ, ಭದ್ರಾವತಿ ತಾಲ್ಲೂಕು.

**ಸಿಂಗನಮನೆ ವ್ಯವಸಾಯ ಸೇವಾ ಸಹಕಾರ ಸಂಘ ನಿ., ಭದ್ರಾವತಿ ತಾಲ್ಲೂಕು**

1. ಬಸವರಾಜ್ ರಾವ್ ಬಿನ್ ಹನುಮಂತರಾವ್, ಕಂಬದಾಳ್, ಹೊಸೂರು ಅಂಚೆ, ಭದ್ರಾವತಿ ತಾಲ್ಲೂಕು
2. ಶ್ರೀಮತಿ ಸುನಂದ ಕೋಂ ಬಸವಣ್ಣ, ಗೋಣಿಬೀಡು ಅಂಚೆ, ಭದ್ರಾವತಿ ತಾಲ್ಲೂಕು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 166

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಎಂಡಬ್ಲ್ಯೂ 401 ಸಿಎಸ್ಎಸ್ 2006, ಬೆಂಗಳೂರು, ದಿನಾಂಕ: 1ನೇ ಫೆಬ್ರವರಿ 2007**

ಈ ಹಿಂದೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ 401 ಸಿಎಸ್ಎಸ್ 2006, ದಿನಾಂಕ: 01.06.2006ರಲ್ಲಿ **ಚಿತ್ರದುರ್ಗ ಜಿಲ್ಲೆ ಮತ್ತು ತಾಲ್ಲೂಕಿನ ಚಿತ್ರದುರ್ಗ ನಗರ ವಿವಿದೋದ್ದೇಶ ಸಹಕಾರ ಸಂಘ ನಿ., ಚಿತ್ರದುರ್ಗ** ಇದರ ಆಡಳಿತ ಮಂಡಳಿಗೆ ಮಾಡಿದ್ದ ಶ್ರೀ ಪಿ.ಎಲ್. ಸಚಿನ್ ಬಿನ್ ಲೋಕೇಶ್ ಹೊಳಲ್ಕೆರೆ ರಸ್ತೆ ಚಿತ್ರದುರ್ಗ ಇವರ ನಾಮನಿರ್ದೇಶನಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಇವರ ಸ್ಥಾನದಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 29ರ ಉಪ ಕಲಂ(1) ಮೇರೆ ದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು **ಶ್ರೀ ಜಿ.ಆರ್. ಹರೀಶ್ ಬಿನ್ ಜೆ.ಟಿ. ರಾಮರಾವ್** ಇವರನ್ನು ಚಿತ್ರದುರ್ಗ ಜಿಲ್ಲೆ ಮತ್ತು ತಾಲ್ಲೂಕಿನ **ನಗರ ವಿವಿದೋದ್ದೇಶ ಸಹಕಾರ ಸಂಘ ನಿ. ಚಿತ್ರದುರ್ಗ** ಇದರ ಆಡಳಿತ ಮಂಡಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 167

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಎಂಡಬ್ಲ್ಯೂ 591 ಸಿಎಸ್ಎಸ್ 2006, ಬೆಂಗಳೂರು, ದಿನಾಂಕ: 29ನೇ ಫೆಬ್ರವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಕೋಲಾರ ಜಿಲ್ಲೆ ಮತ್ತು ತಾಲ್ಲೂಕಿನ ಕ್ಯಾಲನೂರು ರೇಷ್ಮೆ ನೂಲು ಬಿಚ್ಚುವವರ ಕೈಗಾರಿಕಾ ಸಹಕಾರ ಸಂಘ ನಿ., ಕ್ಯಾಲನೂರು** ಇದರ ಆಡಳಿತ ಮಂಡಳಿಗಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

1. ಶ್ರೀ ಸೈಪುಲ್ಲಾಷರೀಫ್ ಬಿನ್ ಆರ್. ಅಹಮದ್ ಷರೀಫ್ ಕ್ಯಾಲನೂರು ಗ್ರಾಮ ಮತ್ತು ಅಂಚೆ ಕೋಲಾರ ತಾ:
2. ಶ್ರೀಮತಿ ಮುಬೀನ್ ರಾಜ್ ಕೋಂ ಸೈಯ್ಯದ್ ಅಸ್ಲಾಂ ಪಾಷ, ಕ್ಯಾಲನೂರು ಗ್ರಾಮ ಮತ್ತು ಅಂಚೆ, ಕೋಲಾರ ತಾ:
3. ಶ್ರೀ ವೆಂಕಟೇಶ್ ಬಿನ್ ಅಕ್ಕಣ್ಣ ಕ್ಯಾಲನೂರು ಗ್ರಾಮ ಮತ್ತು ಅಂಚೆ ಕೋಲಾರ ತಾಲ್ಲೂಕು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 168

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಎಂಡಬ್ಲ್ಯೂ 691 ಸಿಎಸ್ಎಸ್ 2006, ಬೆಂಗಳೂರು, ದಿನಾಂಕ: 29ನೇ ಜನವರಿ 2007**

ಈ ಹಿಂದೆ ಮಾಡಿ ನಾಮನಿರ್ದೇಶನಗಳನ್ನು ರದ್ದುಪಡಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರ ತಾಲ್ಲೂಕಿನ ಲಕ್ಷ್ಮೀಪುರ ವ್ಯವಸಾಯ ಸೇವಾ ಸಹಕಾರ ಸಂಘ ನಿ., ಲಕ್ಷ್ಮೀಪುರ** ಇದರ ಆಡಳಿತ ಮಂಡಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡಿದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

1. ಶ್ರೀ ಪುಟ್ಟಸ್ವಾಮಯ್ಯ ಬಿನ್ ಲೇಟ್ ಚಾಮಯ್ಯ, ಕೆಂಪವಡೇರಹಳ್ಳಿ
2. ಶ್ರೀಮತಿ ಜಯಮ್ಮ ಕೋಂ ಚನ್ನಪ್ಪ, ಕೋಳಮಾರನಕುಪ್ಪೆ
3. ಶ್ರೀ ಹನುಮಯ್ಯ ಬಿನ್ ನರಸಿಂಹಯ್ಯ, ಗೊಲ್ಲರದೊಡ್ಡಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 169

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಎಂಡಬ್ಲ್ಯೂ 692 ಸಿಎಸ್ಎಸ್ 2006, ಬೆಂಗಳೂರು, ದಿನಾಂಕ: 2ನೇ ಫೆಬ್ರವರಿ 2007**

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ 692 ಸಿಎಸ್ಎಸ್ 2006 ದಿನಾಂಕ: 7.9.2006 ರಲ್ಲಿ **ಚಾಮರಾಜನಗರ ಜಿಲ್ಲೆ ಕೊಳ್ಳೆಗಾಲ ತಲ್ಲೂಕಿನ ತೆಳ್ಳನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಬ್ಯಾಂಕ್ ನಿ., ತೆಳ್ಳನೂರು** ಇದರ ಆಡಳಿತ ಮಂಡಳಿಗೆ ಮಾಡಿದ್ದ ಎಲ್ಲಾ ನಾಮನಿರ್ದೇಶನವನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 170

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಒ 752 ಸಿಎಸ್ಎಸ್ 2006, ಬೆಂಗಳೂರು, ದಿನಾಂಕ: 2ನೇ ಫೆಬ್ರವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಮಂಡ್ಯ ಜಿಲ್ಲೆ ಮತ್ತು ತಾಲ್ಲೂಕಿನ ಬೇವಿನಹಳ್ಳಿ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿಯಮಿತ, ಬೇವಿನಹಳ್ಳಿ** ಇದರ ಆಡಳಿತ ಮಂಡಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

1. ಶ್ರೀ ಬಿ.ಎಂ. ಮಾಯಣ್ಣ ಬಿನ್ ಮಾದೇಔಡ, ಬೇವಿನಹಳ್ಳಿ
2. ಶ್ರೀ ಗೋವಿಂದಯ್ಯ ಉ ಮಂಚಯ್ಯ ಬಿನ್ ಅರಸಯ್ಯ, ಬೇವಿನಹಳ್ಳಿ
3. ಶ್ರೀಮತಿ ರಾಜೇಶ್ವರಿ ಕೋಂ ಹೆಚ್.ಎಂ. ರಾಮು, ಎ. ಹುಲ್ಲಕೆರೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 171

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಒ 757 ಸಿಎಸ್‌ಎಸ್ 2006, ಬೆಂಗಳೂರು, ದಿನಾಂಕ: 2ನೇ ಫೆಬ್ರವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ವಿಜಾಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕಿನ ಒಕ್ಕಲುನ ಹುಟ್ಟುವಳಿ ಮಾರಾಟ ಸಹಕಾರ ಸಂಘ ನಿ. ಬಸವನಬಾಗೇವಾಡಿ** ಇದರ ಆಡಳಿತ ಮಂಡಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

1. ಶ್ರೀ ಚನ್ನಪ್ಪ ಭೀಮಪ್ಪ ತಿಳಿಗೋಳ, ಸಾ: ಹೂವಿನಹಿಪ್ಪರಗಿ, ಬಸವನಬಾಗೇವಾಡಿ ತಾಲ್ಲೂಕು.
2. ಶ್ರೀಮತಿ ಲಲಿತಾಬಾಯಿ ಕಾಸನಗೌಡ ಚೌಧರಿ, ಸಾ: ಬಿಸನಾಳ, ಬಸವನಬಗೇವಾಡಿ ತಾಲ್ಲೂಕು.
3. ಶ್ರೀ ವೆಂಕಪ್ಪ ಪುಲೆಪ್ಪ ಬಂಡಿವಡ್ಡರ್, ಸಾ: ಇಟಗಿ ಬಸವನಬಾಗೇವಾಡಿ ತಾಲ್ಲೂಕು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 172 ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಒ 758 ಸಿಎಸ್‌ಎಸ್ 2006, ಬೆಂಗಳೂರು, ದಿನಾಂಕ: 2ನೇ ಫೆಬ್ರವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಶ್ರೀ ಕೆ.ಎನ್. ಬೀರಗೌಡ ಬಿನ್ ಶ್ರೀ ನಿಂಗೇಔಡ, ಕಟ್ಟೆ ತಿಮ್ಮನಹಳ್ಳಿ, ಕಳಸಾಪುರ ಅಂಚೆ, ಚಿಕ್ಕಮಗಳೂರು ತಾಲ್ಲೂಕು ಇವರನ್ನು **ಚಿಕ್ಕಮಗಳೂರು ಜಿಲ್ಲೆ ಮತ್ತು ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಚಿಕ್ಕಮಗಳೂರು** ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 173 ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಒ 797 ಸಿಎಸ್‌ಎಸ್ 2006, ಬೆಂಗಳೂರು, ದಿನಾಂಕ: 2ನೇ ಫೆಬ್ರವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನ ಕಾರಮಂಗಲ ಮತ್ತು ಬೂದಿಕೋಟೆ ವ್ಯವಸಾಯ ಸೇವಾ ಸಹಕಾರ ಸಂಘಗಳ** ಇದರ ಆಡಳಿತ ಮಂಡಳಿಗಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

**ಕಾರಮಂಗಲ ವ್ಯವಸಾಯ ಸೇವಾ ಸಹಕಾರ ಸಂಘ ನಿ.,**

1. ಶ್ರೀ ಗೋವಿಂದಪ್ಪ ವಿ ಬಿನ್ ವೆಂಕಟಗಿರಿಯಪ್ಪ, ಗುಟ್ಟಹಳ್ಳಿ ಗ್ರಾಮ
2. ಶ್ರೀರಾಮ ಬಿನ್ ಸೊಣ್ಣೆಪಲ್ಲಪ್ಪ, ತ್ಯಾರನಹಳ್ಳಿ ಗ್ರಾಮ
3. ಶ್ರೀ ವಿ. ಸುಜಾತ ಕೋ ವಿ. ರವಿ, ಒಂಬಂತ್ತುಗುಳ್ಳಿ ಗ್ರಾಮ

**ಬೂದಿಕೋಟೆ ವ್ಯವಸಾಯ ಸೇವಾ ಸಹಕಾರ ಸಂಘ ನಿ.,**

1. ಶ್ರೀ ಜಿ.ಕೆ. ನಾಯಕ್, ಬೂದಿಕೋಟೆ ಗ್ರಾಮ
2. ಶ್ರೀ ಬಿ.ವಿ. ಕೃಷ್ಣಾ ಬಿನ್ ರಮಣ, ಬೂದಿಕೋಟೆ ಗ್ರಾಮ
3. ಶ್ರೀಮತಿ ಅನಂತಮ್ಮ ಕೋಂ ಮುನಿಯಪ್ಪ, ಅಂಬೇಡ್ಕರ ಕಾಲೋನಿ, ಬೂದಿಕೋಟೆ ಗ್ರಾಮ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 174 ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಒ 87 ಸಿಎಸ್‌ಎಸ್ 2006, ಬೆಂಗಳೂರು, ದಿನಾಂಕ: 5ನೇ ಫೆಬ್ರವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕಿನ ಬ್ಯಾಹಟ್ಟಿ ಗ್ರಾಮದ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ಬ್ಯಾಹಟ್ಟಿ** ಇದರ ಆಡಳಿತ ಮಂಡಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

1. ಶ್ರೀ ಮಲ್ಲಯ್ಯ ಅಂದಾನಯ್ಯ ಪೂಜಾರ್ ಸಾ: ಬ್ಯಾಹಟ್ಟಿ
2. ಶ್ರೀಮತಿ ಗಂಗವ್ವ ಕೋಂ ಕಲ್ಲಪ್ಪ ಬಡಿಗೇರ, ಸಾ: ಬ್ಯಾಹಟ್ಟಿ
3. ಶ್ರೀ ದ್ಯಾವಪ್ಪ ಫಕ್ಕೀರಪ್ಪ ಚಿಗರಿ, ಸಾ: ಬ್ಯಾಹಟ್ಟಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 175

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಒ 125 ಸಿಎಸ್‌ಎಸ್ 2006, ಬೆಂಗಳೂರು, ದಿನಾಂಕ: 5ನೇ ಫೆಬ್ರವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಬೆಳಗೆರೆ ಸೇವಾ ಸಹಕಾರ ಬ್ಯಾಂಕ್ ನಿ., ಬಳಗೆರೆ** ಇದರ ಆಡಳಿತ ಮಂಡಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

1. ಶ್ರೀ ಕೆಂಗಲ್ ಹನುಮಂತರಾಯ ಬಿನ್ ಸಿದ್ದಲಿಂಗಪ್ಪ ಹುಲಿಕುಂಟೆ
2. ಶ್ರೀ ಹೆಚ್. ರಂಗಪ್ಪ ಬಿನ್ ಹುಚ್ಚಪ್ಪ, ಬೆಳಗೆರೆ
3. ಶ್ರೀಮತಿ ರಾಜಮ್ಮ ಕೋಂ ಬಿ.ಎಲ್. ರಾಮೇಗೌಡ, ಬೆಳಗೆರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 176

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಒ 327 ಸಿಎಸ್‌ಎಸ್ 2006, ಬೆಂಗಳೂರು, ದಿನಾಂಕ: 29ನೇ ಫೆಬ್ರವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಬಿಜಾಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕಿನ ವಿವಿಧ 03 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಬ್ಯಾಂಕ್ ನಿ., ಬ್ಯಾಂಕುಗಳ** ಇದರ ಆಡಳಿತ ಮಂಡಳಿಗಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

**ವ್ಯವಸಾಯ ಸೇವಾ ಸಹಕಾರಿ ಸಂಘ ನಿ., ಡೋಣೂರು, ಬಸವನಬಾಗೇವಾಡಿ ತಾಲ್ಲೂಕು**

1. ಶ್ರೀ ಕಾಶನಗೌಡ ಬಾಲನಗೌಡ ಚೌದರಿ
2. ಶ್ರೀಮತಿ ಮಹಾದೇವಿ ಶಾಂತಗೌಡ ಪಾಟೀಲ
3. ಶ್ರೀ ಹುಸನಪ್ಪ ದುರ್ಗಪ್ಪ ಮಾದರ

**ವ್ಯವಸಾಯ ಸೇವಾ ಸಹಕಾರಿ ಸಂಘ ನಿ., ಟಕ್ಕಳಕಿ, ಬಸವನಬಾಗೇವಾಡಿ ತಾಲ್ಲೂಕು**

1. ಶ್ರೀ ಎಂ.ಬಿ. ಪಾಟೀಲ
2. ಶ್ರೀಮತಿ ಬಿಸ್ಮಿಲಾ ಬಂದಗಿಸಾಬ ಲಸ್ಕರಿ
3. ಶ್ರೀ ಯಲ್ಲಪ್ಪ ಲಕ್ಷ್ಮಣ ಮಾದರ

**ವ್ಯವಸಾಯ ಸೇವಾ ಸಹಕಾರಿ ಸಂಘ ನಿ., ಮುತ್ತಗಿ, ಬಸವನಬಾಗೇವಾಡಿ ತಾಲ್ಲೂಕು**

1. ಶ್ರೀ ಸುಭಾಸಗೌಡ ಶಂಕರೌಡ ಪಾಟೀಲ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
**ಆರ್.ಎಸ್. ಹುಚ್ಚಾಚಾರಿ**
ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಪಿ.ಆರ್. 177

**ಅಧಿಸೂಚನೆ**

**ಸಂಖ್ಯೆ: ಸಿಎಂಡಬ್ಲ್ಯೂ 358 ಸಿಎಸ್ಎಸ್ 2006, ಬೆಂಗಳೂರು, ದಿನಾಂಕ: 29ನೇ ಜನವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು **ಶ್ರೀ ಜ್ಞಾನಸಂಪತ್ ಕುಮಾರ್ ಬಿನ್ ಸುಂದರ್‌ರಾಜ್, ಮುಡಿಗುಂಡ ಗ್ರಾಮ ಮತ್ತು ಅಂಚೆ, ಕೊಳ್ಳೆಗಾಲ ತಾಲ್ಲೂಕು ಇವರನ್ನು ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ಮುಡಿಗುಂಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮುಡಿಗುಂಡ** ಇದರ ಆಡಳಿತ ಮಂಡಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
**ಆರ್.ಎಸ್. ಹುಚ್ಚಾಚಾರಿ**
ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಪಿ.ಆರ್. 178

**ಅಧಿಸೂಚನೆ**

**ಸಂಖ್ಯೆ: ಸಿಒ 400 ಸಿಎಸ್ಎಸ್ 2006, ಬೆಂಗಳೂರು, ದಿನಾಂಕ: 29ನೇ ಜನವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಶ್ರೀ ಟಿ.ಎಸ್. ಚಂದ್ರಶೇಖರ್ ಬಿನ್ ನಾಗಪ್ಪ, ತೋರಣಮಾವು, ಕೂದುವಳ್ಳಿ ಅಂಚೆ, ಚಿಕ್ಕಮಗಳೂರು ತಾಲ್ಲೂಕು ಇವರನ್ನು **ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಮೂಡಿಗೆರೆ ಲ್ಯಾಂಪ್ಸ್ ಸಹಕಾರ ಸಂಘ ನಿ.,** ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
**ಆರ್.ಎಸ್. ಹುಚ್ಚಾಚಾರಿ**
ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಪಿ.ಆರ್. 179

**ಅಧಿಸೂಚನೆ**

**ಸಂಖ್ಯೆ: ಸಿಎಂಡಬ್ಲ್ಯೂ 591 ಸಿಎಸ್ಎಸ್ 2006, ಬೆಂಗಳೂರು, ದಿನಾಂಕ: 29ನೇ ಫೆಬ್ರವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಕೋಲಾರ ಜಿಲ್ಲೆ ಮತ್ತು ತಾಲ್ಲೂಕಿನ ವಿವಿಧ 03 ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕರ ಬ್ಯಾಂಕ್ ನಿ.,** ಇದರ ಆಡಳಿತ ಮಂಡಳಿಗಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

**ವೇಮಗಲ್ ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಬ್ಯಾಂಕ್ ನಿ., ವೇಮಗಲ್**

1. ಶ್ರೀ ತಿರುಮಲ್ಲೇಶ್ ಬಿನ್ ಮುನಿಶಾಮಪ್ಪ, ವೇಡಿಹಾಳ ಗ್ರಾಮ ಮತ್ತು ಅಂಚೆ ಕೋಲಾರ ತಾಲ್ಲೂಕು.

**ಕಡಗಟ್ಟೂರು ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಬ್ಯಾಂಕ್ ನಿ.,**

1. ಶ್ರೀ ಕೃಷ್ಣಪ್ಪ ಬಿನ್ ವೆಂಕಟಪ್ಪ, ಬೈರಂಡಹಳ್ಳಿ ಗ್ರಾಮ, ಕಡಗಟ್ಟೂರು ಅಂಚೆ, ಕೋಲಾರ ತಾಲ್ಲೂಕು

**ಮುದ್ದೇರಿ ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಬ್ಯಾಂಕ್ ನಿ.,**

1. ಶ್ರೀ ಮುನಿಯಪ್ಪ ಬಿನ್ ಮುನಿಶಾಮಪ್ಪ, ಮಾರ್ಜನಹಳ್ಳಿ, ಮುದ್ದೇರಿ ಅಂಚೆ, ಕೋಲಾರ ತಾಲ್ಲೂಕು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
**ಆರ್.ಎಸ್. ಹುಚ್ಚಾಚಾರಿ**
ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.

ಪಿ.ಆರ್. 180

**ಅಧಿಸೂಚನೆ**

**ಸಂಖ್ಯೆ: ಸಿಎಂಡಬ್ಲ್ಯೂ 652 ಸಿಎಸ್ಎಸ್ 2006, ಬೆಂಗಳೂರು, ದಿನಾಂಕ: 27ನೇ ಜನವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1) ಮತ್ತು ಪ್ರಕರಣ 53ಎ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಬೀದರ್ ಜಿಲ್ಲೆ ಹುಮನಾಬಾದ್ ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭೀವೃದ್ಧಿ ಬ್ಯಾಂಕ್ ನಿ.,** ಇದರ ಆಡಳಿತ ಮಂಡಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

**ಪ್ರಕರಣ 29(1)ರಡಿಯಲ್ಲಿ**

1. ಶ್ರೀ ಕೆ.ಎ. ಅಲ್ತಾಫ್ ಹುಸೆನ್ ಬಿನ್ ಫಯಾಜ್ ಹುಸೇನ್, ನಂದಗಾಂವ್ ಗ್ರಾಮ, ಹುಮನಾಬಾದ್ ತಾ:
2. ಶ್ರೀಮತಿ ಅನುಸೂಯ (ಮದರ್ ಗಾಂವ್) ಕೋಂ ಕಲ್ಲಪ್ಪ ಹುಡಗಿ ಗ್ರಾಮ ಮತ್ತು ಅಂಚೆ, ಹುಮನಾಬಾದ್ ತಾ:
3. ಶ್ರೀ ರಾಮಚಂದ್ರ ಬಿನ್ ನರಸಪ್ಪ ಉಪ್ಪಾರ್, ಸುಲ್ತಾನ್ ಬಾದ್, ಹುಮನಾಬಾದ್ ತಾಲ್ಲೂಕು

**ಪ್ರಕರಣ 53(ಎ) ಅಡಿಯಲ್ಲಿ**

1. ಶ್ರೀ ಸಂಜೀವ್ ಕುಮಾರ್ ಬಿನ್ ಅಂಬಾದಾಸ್ ರಾವ್, ಗರ್ಜಿನಗರ, ಹುಮನಾಬಾದ್ ತಾಲ್ಲೂಕು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 181

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಎಂಡಬ್ಲ್ಯೂ 707 ಸಿಎಸ್ಎಸ್ 2006, ಬೆಂಗಳೂರು, ದಿನಾಂಕ: 29ನೇ ಜನವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಗೆರೆ ವ್ಯವಸಾಯ ಸೇವಾ ಸಹಕಾರ ಸಂಘ ನಿ.,** ಇದರ ಆಡಳಿತ ಮಂಡಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

1. ಶ್ರೀ ಟಿ.ಎ. ಶ್ರೀನಿವಾಸಮೂರ್ತಿ, ತಾವರೆಕೆರೆ
2. ಶ್ರೀಮತಿ ಎಂ.ಎಸ್. ನಾಗರತ್ನಮ್ಮ ತಾವರೆಕೆರೆ
3. ಶ್ರೀ ಕೊಲ್ಕಾರ್ ಕರಿಯಣ್ಣ, ಗುರುಬೋವಿಪಾಳ್ಯ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾ:

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 182

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಒ 712 ಸಿಎಸ್ಎಸ್ 2006, ಬೆಂಗಳೂರು, ದಿನಾಂಕ: 29ನೇ ಜನವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ದಿದ್ದಿಗಿ ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ.,** ಇದರ ಆಡಳಿತ ಮಂಡಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

1. ಶ್ರೀಮತಿ ಜರೀನಾ ಬೇಗಂ ಕೋಂ ಹುಸೇನ ಬಾಷ, ಬನ್ನಗನೂರು, ಸಿಂಧನೂರು ತಾ:
2. ಶ್ರೀ ಬಸಣ್ಣ ಬಿನ್ ಯಂಕಪ್ಪದೇಸಾಯಿ, ರಾಮತ್ನಾಳ, ಸಿಂಧನೂರು ತಾ:
3. ಶ್ರೀ ಚೆನ್ನಯ್ಯ ಸ್ವಾಮಿ ಬಿನ್ ಶಾಂತಮೂರ್ತಿ ಸ್ವಾಮಿ ದಿದ್ದಿಗಿ, ಸಿಂಧನೂರು ತಾ:

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 183

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಒ 741 ಸಿಎಸ್‌ಎಸ್ 2006, ಬೆಂಗಳೂರು, ದಿನಾಂಕ: 03ನೇ ಫೆಬ್ರವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ವಿವಿಧ** 04 ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಗಳಿಗೆ ಸದಸ್ಯರುಗಳಿಗಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

**ಕಾವಳ ಮುಡೂರು ವ್ಯವಸಾಯ ಸೇವಾ ಸಹಕಾರ ಬ್ಯಾಂಕು ನಿ., ಬಂಟ್ವಾಳ ತಾ:**

1. ಶ್ರೀ ಮೋಹನ್ ಆಚಾರ್ ಬಿನ್ ಅನಂತ ಆಚಾರ್, ಕೊಡಂಬೆಟ್ಟು ಮನೆ, ಕಾವಳ ಮೂಡೂರು ಗ್ರಾಮ, ಕವಳ ಕಟ್ಟೆ ಅಂಚೆ
2. ಶ್ರೀಮತಿ ವಾರಿಜ ಕೋಂ ಪೂವಪ್ಪ ನಾಯ್ಕ್, ನೆಲ್ಲಿಗುಡ್ಡೆ, ಕಾವಳ ಮೂಡೂರು ಗ್ರಾಮ, ಕಾವಳಕಟ್ಟೆ, ಬಂಟ್ವಾಳ ತಾ:
3. ಶ್ರೀ ಮೋಹನ್ ನಾಯ್ಕ್‌ಬಿನ್ ಮಾಧವ ನಾಯ್ಕ್, ಕೊಪ್ಪರದೊಡ್ಡು ಮನೆ, ಕಾವಳ ಮೂಡುರು ಗ್ರಾಮ, ಕಾವಳಕಟ್ಟೆ ಅಂಚೆ

**ಸಿ.ಎ. ಬ್ಯಾಂಕ್ ನಿ., ಬಂಟ್ವಾಳ ತಾಲ್ಲೂಕು**

1. ಶ್ರೀಮತಿ ಸಾವಿತ್ರಿ ವಿ. ಗೌಡ ಕೋಂ ವಸಂತಗೌಡ, ಅಗ್ಬಲ ಮನೆ, ಉಳಿಗ್ರಾಮ ಮತ್ತು ಅಂಚೆ, ಬಂಟ್ವಾಳ ತಾ:
2. ಶ್ರೀ ಪುರುಷೋತ್ತಮ ಪೂಜಾರಿ ಬಿನ್ ಮುತ್ತಪ್ಪ ಪೂಜರಿ, ಪಳಿಕೆ ಮನೆ, ಉಳಿಗ್ರಾಮ ಮತ್ತು ಅಂಚೆ ಬಟ್ವಾಳ ತಾ:
3. ಶ್ರೀಮತಿ ಗಿರಿಜ ಕೋಂ ಬಾಬುಮೇರ, ನೀರಾಜಿ ಕ್ವಾರ್ಟರ್ಸ್, ಉಳಿಗ್ರಾಮ ಮತ್ತು ಅಂಚೆ ಬಂಟ್ವಾಳ ತಾಲ್ಲೂಕು

**ಮಣಿನಾಲ್ಕೂರು ಸೇವಾ ಸಹಕಾರಿ ಬ್ಯಾಂಕ್ ನಿ., ಸರಪ್ಪಾಡಿ, ಬಂಟ್ವಾಳ ತಾಲ್ಲೂಕು.**

1. ಶ್ರೀ ಚಂದ್ರಹಾಸ ಮೇಂಡ ಬಿನ್ ನಾರಾಯಣ ಮೇಂಡ ಅನೆಜ ಮನೆ, ಅಲ್ಲಿಪಾದೆ ಅಂಚೆ, ಬಂಟ್ವಾಳ ತಾಲ್ಲೂಕು.
2. ಶ್ರೀಮತಿ ನಳಿನಿ ಕೋಂ ನಾರಾಯಣ ಪೂಜಾರಿ, ಬೆಚ್ಚಾರು ಮನೆ, ಅಜಲಮೊಗರು ಅಂಚೆ, ಮಣಿನಾಲ್ಕೂರು ಗ್ರಾಮ.
3. ಶ್ರೀ ಪೂವಪ್ಪ ಬಿನ್ ನಕ್ಕುರ ಮುಗೇರ, ಸುಲ್‌ದುಗ್ಗು ಮನೆ, ಮಣಿನಾಲ್ಕೂರು ಗ್ರಾಮ ಮತ್ತು ಅಂಚೆ ಬಂಟ್ವಾಳ ತಾ:

**ಕಾವಳ ಪಡೂರು ಸೇವಾ ಸಹಕಾರಿ ಬ್ಯಾಂಕ್ ನಿ., ಬಂಟ್ವಾಳ ತಾಲ್ಲೂಕು**

1. ಎಂ.ಎ. ಉಸ್ಮಾನ್ ಬಿನ್ ಎಂಡಿ ಅಹಮದ್, ಕಾಡಬೆಟ್ಟು ಅಂಚೆ ಮತ್ತು ಗ್ರಾಮ, ಬಂಟ್ವಾಳ ತಾ:
2. ಶ್ರೀ ಆನಂದ ನಾಯ್ಕ್ ಬಿನ್ ಸೋಮ ನಾಯ್ಕ್ ಮಟ್ಟಿಪಲ್ಕೆ ಮನೆ, ಕಾಡಬೆಟ್ಟು ಗ್ರಾಮ ಮತ್ತು ಅಂಚೆ
3. ಶ್ರೀಮತಿ ಸುಜಾತ ಶೆಣೈ ಕೋಂ ಎಂ.ಪಿ. ಶೆಣೈ, ನಾಯಕ್ಸ್ ಬಿಲ್ಡಿಂಗ್ ವಗ್ಗಾ, ಕಾಡಬೆಟ್ಟು ಅಂಚೆ ಬಂಟ್ವಾಳ ತಾ:

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಪಿ.ಆರ್. 184

**ಅಧಿಸೂಚನೆ**

**ಸಂಖ್ಯೆ: ಸಿಒಡಬ್ಲ್ಯೂ 751 ಸಿಎಸ್‌ಎಸ್ 2006, ಬೆಂಗಳೂರು, ದಿನಾಂಕ: 03ನೇ ಫೆಬ್ರವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಮಂಡ್ಯ ಜಿಲ್ಲೆ ಮತ್ತು ತಾಲ್ಲೂಕಿನ ವಿವಿಧ 04 ವ್ಯವಸಾಯ ಸೇವಾ ಸಹಕಾರ ಬ್ಯಾಂಕಗಳ** ಆಡಳಿತ ಮಂಡಳಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

**ಭೂತನ ಹೊಸೂರು ವ್ಯವಸಾಯ ಸೇವಾ ಸಹಕಾರ ಬ್ಯಾಂಕು ನಿಯಮಿತ.,**

1. ಶ್ರೀ ಎಸ್.ಪಿ. ಪುಟ್ಟಯ್ಯ ಬಿನ್ ಎಸ್. ಪುಟ್ಟಯ್ಯ, ಸೂಗನಹಳ್ಳಿ
2. ಶ್ರೀ ಕೆ. ಸುರೇಶ ಬಿನ್ ಲೇಟ್ ಕೆಂಪೇಗೌಡ, ಮಲ್ಲೇಶ್ವರ ಬಡಾವಣೆ, ಕಬ್ಬನಹಳ್ಳಿ
3. ಶ್ರೀಮತಿ ಎಚ್.ಎಸ್. ಉಮಾ ಕೋಂ ಎಚ್.ಎಸ್. ಮಾದೇಗೌಡ, ಹೆಮ್ಮಿಗೆ

**ವ್ಯವಸಾಯ ಸೇವಾ ಸಹಕಾರ ಬ್ಯಾಂಕು ನಿಯಮಿತ., ಮಂಗಲ**

1. ಶ್ರೀ ಎಂ.ಇ. ಶಂಕರ ಬಿನ್ ಈರೇಗೌಡ ಉ: ಚಿಕ್ಕೀರೇಗೌಡ
2. ಶ್ರೀಮತಿ ಸೀತಲಕ್ಷ್ಮಿ ಕೋಂ ಎಂ.ಕೆ. ಕೆಂಪೇಗೌಡ
3. ಶ್ರೀ ಎಲ್. ರುದ್ರಯ್ಯ ಬಿನ್ ಈರಯ್ಯ ಲೋಕಸರ

**ವ್ಯವಸಾಯ ಸೇವಾ ಸಹಕಾರ ಬ್ಯಾಂಕು ನಿಯಮಿತ., ಹೊಸಬೂದನೂರು**

1. ಶ್ರೀ ಬಿ.ಎಸ್. ಲೋಕೇಶ್ ಬಿನ್ ಸಿದ್ದರಾಮಯ್ಯ
2. ಶ್ರೀ ರಾಜು ಬಿನ್ ಬಿ. ಬೋರಯ್ಯ
3. ಶ್ರೀಮತಿ ಹೆಚ್.ಸಿ. ಜಯಮ್ಮ ಕೋಂ ಮುತ್ತಯ್ಯ

**ವ್ಯವಸಾಯ ಸೇವಾ ಸಹಕಾರ ಬ್ಯಾಂಕು ನಿಯಮಿತ., ಹಳೇಬೂದನೂರು**

1. ಶ್ರೀ ಪಿ.ಸಿ. ಸಿದ್ದರಾಜು ಬಿನ್ ಚನ್ನಪ್ಪ
2. ಶ್ರೀಮತಿ ರೇಣುಕ ಕೋಂ ನಾಗರಾಜು
3. ಶ್ರೀ ಅಯ್ಯಪ್ಪ ಬಿನ್ ಲೇಟ್ ಕರ್ಪಯ್ಯ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 185

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಒ 780 ಸಿಎನ್‌ಎಸ್ 2006, ಬೆಂಗಳೂರು, ದಿನಾಂಕ: 05ನೇ ಫೆಬ್ರವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಹಾವೇರಿ ಜಿಲ್ಲೆ ಸವಣೂರು ತಾಲ್ಲೂಕಿನ ಹೂವಿನಶಿಗ್ಗಿ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ಹೂವಿನಶಿಗ್ಗಿ** ಆಡಳಿತ ಮಂಡಳಿಗೆ ಸದಸ್ಯರುಗಳಿಗಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

1. ಶ್ರೀ ಮಲ್ಲನಗೌಡ ಶೇಖರಗೌಡ ಪಾಟೀಲ್ ಸಾ: ಹೊನ್ನಿಕೊಪ್ಪ
2. ಶ್ರೀ ಶಂಕರಪ್ಪ ಬಸವ್ವ ಮಳಿಗೆಪ್ಪನವರ, ಸಾ: ಹೂವಿನಶಿಗ್ಗಿ
3. ಶ್ರೀಮತಿ ಚನ್ನವ್ವ ಕೋಂ ಮಹದೇವಪ್ಪ ಮಲ್ಲಯ್ಯನವರ್ ಸಾ: ಹೊನ್ನಿಕೊಪ್ಪ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 186

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಒ 775 ಸಿಎನ್‌ಎಸ್ 2006, ಬೆಂಗಳೂರು, ದಿನಾಂಕ: 27ನೇ ಜನವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ವಿವಿಧ 08 ಸಹಕಾರ ಸಂಘಗಳ** ಆಡಳಿತ ಮಂಡಳಿಗಳಿಗೆ ಸದಸ್ಯರುಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

**1) ಪ್ರಾಥಮಿಕ ಕೃಷಿ ಪತ್ತಿನ ಬ್ಯಾಂಕ್ ನಿ., ಸೂಳಿಭಾವಿ, ಹುನಗುಂದ ತಾಲ್ಲೂಕು**

1. ಶ್ರೀ ಈರಣ್ಣ ಸಂಗಪ್ಪ ಬೆಳವಣಿಕೆ
2. ಶ್ರೀಮತಿ ನಿಂಗವ್ವ ಶೇಕಪ್ಪ ಹಕಾರಿ
3. ಶ್ರೀ ಯಮನಪ್ಪ ದುರ್ಗಪ್ಪ ಮಾದಾರ

**2) ಪ್ರಾಥಮಿಕ ಗ್ರಾಹಕರ ಸಹಕಾರ ಸಂಘ ನಿ., ಸೂಳಿಭಾವಿ, ಹುನಗುಂದ ತಾಲ್ಲೂಕು**

1. ಶ್ರೀ ಮಲ್ಲಪ್ಪ ರವೀಂದ್ರಪ್ಪ ಕಮತಗಿ
2. ಶ್ರೀಮತಿ ಭಾರತಿ ನೀಲನಗೌಡ, ಹಲಗತ್ತಿ
3. ಶ್ರೀ ದುರ್ಗಪ್ಪ ಹನುಮಪ್ಪ ಮಾದರ

**3) ಶಾಖಾಂಬರಿ ನೇಕಾರರ ಸಹಕಾರ ಸಂಘ ನಿ., ಸೂಳಿಭಾವಿ, ಹುನಗುಂದ ತಾಲ್ಲೂಕು**

1. ಶ್ರೀ ಸುರೇಶ್ ದಿಗಂಬರಪ್ಪ ಕಂಠಿ
2. ಶ್ರೀಮತಿ ಲಕ್ಷ್ಮೀಭಾಯಿ ಯೋಗಪ್ಪ ಕಟಗೇರಿ
3. ಶ್ರೀ ವೆಂಕಣ್ಣ ಹನುಮಂತಪ್ಪ ಹಿಂದಿನಮನಿ

**4) ಮಹಾಲಕ್ಷ್ಮಿ ನೇಕಾರರ ಸಹಕಾರಿ ಸಂಘ ನಿ., ಸೂಳಿಭಾವಿ, ಹುನಗುಂದ ತಾಲ್ಲೂಕು**

1. ಶ್ರೀ ಪಾಂಡಪ್ಪ ತುಕ್ಕಪ್ಪ ಹಣಗಿ
2. ಶ್ರೀಮತಿ ಸುಮಾಭಾಯಿ ರವೀಂದ್ರ ಹುಲಮನಿ
3. ಶ್ರೀ ಸೋಮಣ್ಣ ದೊಡ್ಡಬಸಪ್ಪ ಭಜಂತ್ರಿ

**5) ಬನಶಂಕರಿ ವಿದ್ಯುತ್ ಚಾಲಿತ ಮಗ್ಗಗಳ ಸಹಕಾರಿ ಸಂಘ ನಿ., ಸೂಳಿಭಾವಿ ಹುನಗುಂದ ತಾಲ್ಲೂಕು**

1. ಶ್ರೀ ಸುಬ್ಬಣ್ಣ ಸೋಮಪ್ಪ ಗಾಡಿ
2. ಶ್ರೀಮತಿ ರಂಗವ್ವ ಶೇಕಪ್ಪ ದುತ್ತರಗಿ
3. ಶ್ರೀ ಸಣ್ಣಭೀಮಪ್ಪ ಭಜಂತ್ರಿ

**6) ಪ್ರಾಥಮಿಕ ಕೃಷಿ ಪತ್ತಿನ ಬ್ಯಾಂಕ್ ಸಂಘ ನಿ., ಗೂಡೂರು ಎಸ್.ಸಿ. ಹುನಗುಂದ ತಾಲ್ಲೂಕು**

1. ಶ್ರೀ ಎಸ್.ಹೆಚ್. ಚಿಲ್ಲಾಪುರ ಸಾ. ವಡಗೇರಿ
2. ಶ್ರೀಮತಿ ಪ್ರೇಮಾ ಅಂಬರೀಷ ಸಲಿಮಠ, ಸಾ: ಗುಡೂರು
3. ಶ್ರೀ ಕೋಣಪ್ಪ ವಡ್ಡರ ಸಾ. ಗುಡೂರು

**7) ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ., ನಿಂಬಲಗುಂದಿ, ಹುನಗುಂದ ತಾಲ್ಲೂಕು**

1. ಶ್ರೀ ಹನುಮಂತ ದುರಗಪ್ಪ ಐಹೊಳೆ ಸ. ಬೆನಕನವಾರಿ
2. ಶ್ರೀಮತಿ ರತ್ನವ್ವ ಚನ್ನಪ್ಪ ಹಸಬಿ ಸಾ. ಮುಳ್ಳೂರ
3. ಶ್ರೀ ಡಿವೆಪ್ಪ ಬಸಪ್ಪ ಮಡಿಕಾರ, ಸಾ. ಐಹೊಳೆ

**8) ಇಲ್ಲಾಳ ವ್ಯವಸಾಯ ಸೇವಾ ಸಹಕಾರ ಸಂಘ ನಿ., ಇಲ್ಲಾಳ, ಹುನಗುಂದ ತಾಲ್ಲೂಕು**

1. ಶ್ರೀ ಪಾವಾಡೆಪ್ಪ ಸಂಗಪ್ಪ ಅಂಗಡಿ
2. ಶ್ರೀಮತಿ ಕಸ್ತೂರವ್ವ ಮಲ್ಲಯ್ಯ ಮೂಗನೂರ
3. ಶ್ರೀ ದುರಗಪ್ಪ ಯಮನಪ್ಪ ಹರಿಜನ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 187

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಅಧಿಸೂಚನೆ**

**ಸಂಖ್ಯೆ: ಸಿಒ 831 ಸಿಎಸ್ಎಸ್ 2006, ಬೆಂಗಳೂರು, ದಿನಾಂಕ: 29ನೇ ಜನವರಿ 2007**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಚಿಕ್ಕಮಂಗಲ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ಚಿಕ್ಕನವಂಗಲ** ಇದರ ಆಡಳಿತ ಮಂಡಳಿನವರಿಗೆ ಸದಸ್ಯರುಗಳನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡುತ್ತದೆ. ಹೀಗೆ ನಾಮನಿರ್ದೇಶನಗೊಂಡ ಸದಸ್ಯರ ಪದಾವಧಿಯು ಚುನಾಯಿತ ಸಮಿತಿಯ ಪದಾವಧಿಯು ಮುಕ್ತಾಯವಾಗುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

1. ಶ್ರೀ ಶಾಂತಪ್ಪ ಬಿನ್ ಸಿದ್ದಪ್ಪ ಜಾವೂರು, ತರೀಕೆರೆ ತಾಲ್ಲೂಕು
2. ಶ್ರೀ ಶಿವಾನಂದ ಕೆ. ಬಿನ್ ಫಕ್ಕೀರಪ್ಪ, ಚಿಕ್ಕನವಂಗಲ, ತರೀಕೆರೆ ತಾಲ್ಲೂಕು
3. ಶ್ರೀ ವೈ.ಬಿ. ಕಮಲಮ್ಮ ಕೋಂ ಮಂಜುನಾಥ್, ಹಿರೇಕಾನವಂಗಲ ಅಂಚೆ, ಶಿವನಿ ಹೋಬಳಿ, ತರೀಕೆರೆ ತಾಲ್ಲೂಕು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 188

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

**ಅಧಿಸೂಚನೆ**

**ಸಂಖ್ಯೆ: ಗ್ರಾಅಪ:7:ಕಭೂನಿ. 2006, ಬೆಂಗಳೂರು, ದಿನಾಂಕ: 7ನೇ ಫೆಬ್ರವರಿ 2006**

ಕರ್ನಾಟಕ ಭೂಸೇನಾ ನಿಗಮ ನಿಯಮಿತದ ಅಂತರ್ನಿಯಮಾವಳಿ ಅನುಚ್ಛೇಧ ಸಂಖ್ಯೆ.75 (I) ಹಾಗೂ 75(IV) ರಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರದನ್ವಯ ಶ್ರೀ ಅರಗಜ್ಞಾನೇಂದ್ರ ಮಾನ್ಯ ಶಾಸಕರು, ತೀರ್ಥಹಳ್ಳಿ ಕ್ಷೇತ್ರ ಶಿವಮೊಗ್ಗ ಜಿಲ್ಲೆ, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ಭೂಸೇವಾ ನಿಗಮ ನಿಯಮಿತದ ನಿರ್ದೇಶಕರುಗಳ ಮಂಡಳಿಯ ನಿರ್ದೇಶಕರನ್ನಾಗಿ ಹಾಗೂ ಅಧ್ಯಕ್ಷರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ ಮತ್ತು ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿ, ಭಾ.ಆ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರನ್ನು ಕರ್ನಾಟಕ ಭೂಸೇನಾ ನಿಗಮ ನಿಯಮಿತದ ನಿರ್ದೇಶಕರುಗಳ ಮಂಡಳಿಯ ನಿರ್ದೇಶಕರನ್ನಾಗಿ ಮುಂದುವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್. ಶಾಂತರಾಜ್**

ಪಿ.ಆರ್. 189

ನಿರ್ದೇಶಕರು (ಸ್ವಉಕಾ) ಹಾಗೂ
ಸರ್ಕಾರದ ಪದ ನಿಮಿತ್ತ ಅಪರ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 96 ರಾಶಾಪ್ರ 2006, ಬೆಂಗಳೂರು, ದಿನಾಂಕ: 19ನೇ ಫೆಬ್ರವರಿ 2007**

The Karnataka Home Guards Act 1962 (Karnataka Act 35 of 1962) ಅಧಿಕೃತ ಕನ್ನಡ ಭಾಷಾಂತರವನ್ನು ಕರ್ನಾಟಕ ಅಫಿಷಿಯಲ್ ಲಾಂಗ್ವೇಜ್ ಆಕ್ಟ್, 1963ರ ಪ್ರಕರಣ 5A ಅಡಿಯಲ್ಲಿ ರಾಜ್ಯಪಾಲರ ಅಧಿಕಾರದ ಮೇರೆಗೆ ಸಾರ್ವಜನಿಕ ಮಾಹಿತಿಗಾಗಿ ರಾಜ್ಯ ಪತ್ರದಲ್ಲಿ ಮರು ಪ್ರಕಟಿಸಲು ಆದೇಶಿಸಲಾಗಿದೆ.

# ಕರ್ನಾಟಕ ಗೃಹ ರಕ್ಷಕ ದಳ ಅಧಿನಿಯಮ, 1962

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ
2. ಪರಿಭಾಷೆಗಳು
3. ಗೃಹ ರಕ್ಷಕ ದಳದ ರಚನೆ ಮತ್ತು ಕಮಾಂಡೆಂಟ್ ಜನರಲ್ ಮತ್ತು ಕಮಾಂಡೆಂಟರ ನೇಮಾಕಾತಿ
4. ಸದಸ್ಯರ ನೇಮಕಾತಿ
5. ಸದಸ್ಯರ ಪ್ರಕಾರ್ಯಗಳು ಮತ್ತು ಕರ್ತವ್ಯಗಳು
5ಎ. ಗೃಹ ರಕ್ಷಕ ದಳದವರು ಕರ್ತವ್ಯಕ್ಕೆ ಹಾಜರಾಗಲು ಅನುಮತಿಸಲು ನಿಯೋಜಕನ ಹೊಣೆಗಾರಿಕೆ
6. ಅಧಿಕಾರಗಳು, ರಕ್ಷಣೆ ಮತ್ತು ನಿಯಂತ್ರಣ
7. ಪೊಲೀಸ್ ದಳದ ಅಧಿಕಾರಿಗಳಿಂದ ನಿಯಂತ್ರಣ
8. ಸದಸ್ಯನಾಗಿರುವುದು ನಿಂತುಹೋದ ನಂತರ ಪ್ರಮಾಣ ಪತ್ರ, ಆಯುಧಗಳು, ಇತ್ಯಾದಿಗಳನ್ನು ಹಿಂದಕ್ಕೆ ಒಪ್ಪಿಸುವುದು.
9. ಕರ್ತವ್ಯ ನಿರ್ಲಕ್ಷ್ಯ, ಇತ್ಯಾದಿಗಳಿಗಾಗಿ ಸದಸ್ಯರಿಗೆ ಶಿಕ್ಷೆ
10. ದಂಡನೆ
11. ಕಮಾಂಡೆಂಟ್‌ನ ಅಥವಾ ಕಮಾಂಡೆಂಟ್ ಜನರಲ್‌ನ ವಿರುದ್ಧ ಶಿಸ್ತು ಕ್ರಮ
12. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ
13. ಗೃಹ ರಕ್ಷಕ ದಳದ ಸದಸ್ಯರು ಲೋಕ ನೌಕರರಾಗಿರುವುದು
14. ಗೃಹ ರಕ್ಷಕ ದಳಗಳ ಸದಸ್ಯರನ್ನು ಸ್ಥಳೀಯ ಪ್ರಾಧಿಕಾರಗಳ ಸದಸ್ಯರಾಗುವುದರಿಂದ ಅನರ್ಹಗೊಳಿಸದಿರುವುದು
15. 1957ರ ಕರ್ನಾಟಕ ಅಧಿನಿಯಮ 4ರ ತಿದ್ದುಪಡಿ
16. ಕೆಲವು ಅಧಿನಿಯಮಗಳ ನಿರಸನ ಮತ್ತು ಉಳಿಸುವಿಕೆಗಳು
17. 1962ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 4 ರ ನಿರಸನ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

## I

**1962ರ ಅಧಿನಿಯಮ 35.–** ತುರ್ತು ಸ್ಥಿತಿಯ ದೃಷ್ಟಿಯಿಂದ ಗೃಹ ರಕ್ಷಕ ಸಂಘಟನೆಯು, ಸದ್ಯದಲ್ಲಿ ರಾಜ್ಯದ ಮುಂಬಯಿ ಕರ್ನಾಟಕ ಜಿಲ್ಲೆಗಳಲ್ಲಿ ಮಾತ್ರ ಅಸ್ತಿತ್ವದಲ್ಲಿದೆ. ಸದ್ಯದ ತುರ್ತುಪರಿಸ್ಥಿತಿಯ ದೃಷ್ಟಿಯಿಂದ ವ್ಯಕ್ತಿಗಳ ಸಂರಕ್ಷಣೆ, ಸ್ವತ್ತುಗಳ ಭದ್ರತೆ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ಸಂಬಂಧಪಟ್ಟಂತೆ ಕರ್ತವ್ಯಗಳನ್ನು ನಿರ್ವಹಿಸಲು ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ ವ್ಯಕ್ತಿಗಳ ಸ್ವಯಂ ಸೇವಾ ನಿಕಾಯವನ್ನು ಹೊಂದಿರುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಆದ್ದರಿಂದ ಇಡೀ ರಾಜ್ಯದಲ್ಲಿ ಗೃಹ ರಕ್ಷಕರನ್ನು ಸಂಘಟಿಸಲು ಪ್ರಸ್ತಾವಿಸಲಾಗಿದೆ. ಸಂಘಟನೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಮತ್ತು ನಿರ್ವಹಿಸುವ ಸಲುವಾಗಿ, ಏಕರೂಪದ ಒಂದು ಕಾನೂನನ್ನು ಹೊಂದುವುದು ಅವಶ್ಯವಾಗಿದೆ. ವಿಷಯವು ತುರ್ತು ಸ್ವರೂಪದ್ದಾಗಿದ್ದರಿಂದ ಮತ್ತು ವಿಧಾನಮಂಡಲವು ಅಧಿವೇಶನದಲ್ಲಿಲ್ಲದಿರುವುದರಿಂದ, ಮೈಸೂರು ಗೃಹ ರಕ್ಷಕ ದಳ ಅಧ್ಯಾದೇಶ, 1962ನ್ನು ಹೊರಡಿಸಲಾಯಿತು. ಸದರಿ ಅಧ್ಯಾದೇಶದ ಬದಲಾಗಿ ಈ ವಿಧೇಯಕವನ್ನು ಮಂಡಿಸಲು ಪುನ: ಉದ್ದೇಶಿಸಲಾಗಿದೆ.

ನಿರಸನ ಮತ್ತು ಉಳಿಸುವಿಕೆಗಳಿಗೆ ಸಂಬಂಧಿಸಿದ ಎರಡು ಖಂಡಗಳ ಮತ್ತು ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳನ್ನು ವಿಧಾನಮಂಡಲದ ಮುಂದೆ ಮಂಡಿಸಲು ಒಂದು ಉಪಬಂಧದ ಸೇರ್ಪಡೆಯ ಹೊರತಾಗಿ ಉಳಿದವುಗಳ ಸಂಬಂಧದಲ್ಲಿ ವಿಧೇಯಕದ ಉಪಬಂಧಗಳು ಅಧ್ಯಾದೇಶದ ಉಪಬಂಧಗಳಿಗೆ ತದ್ರೂಪವಾಗಿವೆ.

(ದಿನಾಂಕ 1ನೇ ಡಿಸೆಂಬರ್ 1962ರ, ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ IV–2ಎ.ನಲ್ಲಿ ಸಂ.238 ಆಗಿ ಪುಟ 8ರಲ್ಲಿ ಪ್ರಕಟವಾಗಿದೆ).

## II

**1977ರ ತಿದ್ದುಪಡಿ ಮಾಡುವ ಅಧಿನಿಯಮ 11.–** ಕರ್ನಾಟಕ ರಾಜ್ಯ ಗೃಹ ರಕ್ಷಕ ದಳವು ರಾಜ್ಯದಲ್ಲಿನ ಶಾಸನಬದ್ಧ ಒಂದು ಸಂಸ್ಥೆಯಾಗಿದ್ದು, ಚುನಾವಣೆಗಳ, ರೈಲ್ವೆ ಮುಷ್ಕರಗಳ ಮತ್ತು ರಾಜಕೀಯ ಮತ್ತು ಕಾರ್ಮಿಕ ಪ್ರದರ್ಶನಗಳಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಅನಿವಾರ್ಯ ಹಾಗೂ ನಿರ್ಣಾಯಕವಾಗಿದೆ. ಗೃಹ ರಕ್ಷಕ ದಳದ ಸದಸ್ಯರಲ್ಲಿ ಪೂರ್ಣ ಕಾಲಿಕ ವೇತನ ಪಡೆಯುವ ಕೆಲವು ಅಧಿಕಾರಿಗಳ ಹೊರತಾಗಿ, ಉಳಿದೆಲ್ಲರೂ ಖಾಸಗಿ ಹಾಗೂ ಸರ್ಕಾರಿ ಉದ್ದಿಮೆಗಳಲ್ಲಿ ಕೆಲಸದಲ್ಲಿರುವ ಸ್ವಯಂ ಸೇವಕರಾಗಿರುತ್ತಾರೆ. ಗೃಹ ರಕ್ಷಕ ದಳವು ವೈದ್ಯರು, ವಕೀಲರು, ಶಿಕ್ಷಕರು, ಇಂಜಿನಿಯರುಗಳು, ವ್ಯಾಪಾರಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ಮತ್ತು ರೈತರುಗಳಂಥ ವಿವಿಧ ವೃತ್ತಿಗಳು ಮತ್ತು ವ್ಯಾಪಾರಗಳಿಗೆ ಸೇರಿದವರಿಂದ ಕೂಡಿರುತ್ತದೆ. ತುರ್ತು ಸನ್ನಿವೇಶಗಳಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಅಥವಾ ಸಾರ್ವಜನಿಕ ಸ್ವತ್ತನ್ನು ರಕ್ಷಿಸಲು ಅಂಥ ಸದಸ್ಯರುಗಳನ್ನು ಕರ್ತವ್ಯದ ಮೇಲೆ ಕರೆಯಬೇಕಾದಾಗ ಅವರ ನಿಯೋಜಕರು ಅವರ ಗೈರು ಹಾಜರಿಯನ್ನು ಕರ್ತವ್ಯದ ಮೇಲಿನ ಗೈರು ಹಾಜರಿ ಎಂದು ಪರಿಗಣಿಸುವುದಿಲ್ಲವಾದುದರಿಂದ ಅವರನ್ನು ಕರ್ತವ್ಯದ ಮೇಲೆ ಕರೆಯಲು ತೊಂದರೆಯಾಗಿರುವುದು ಅನುಭವಕ್ಕೆ ಬಂದಿದೆ. ತತ್ಪರಿಣಾಮವಾಗಿ ನೌಕರರು ಗೈರು ಹಾಜರಾದ ಅವಧಿಯ ಮಜೂರಿ, ಸಂಬಳ, ಇತ್ಯಾದಿಗಳ ಕಡಿತವನ್ನು ಎದುರಿಸಬೇಕಾಗುತ್ತದೆ. ಅಂಥ ವ್ಯಕ್ತಿಗಳು ಕರೆಗೆ ಓಗೊಟ್ಟು ಗೃಹ ರಕ್ಷಕರಾಗಿ ಸೇವೆ ಸಲ್ಲಿಸಲು ಪ್ರತಿಕ್ರಿಯಿಸಿದಾಗ ಕೆಲವು ಸಂದರ್ಭಗಳಲ್ಲಿ, ಅವರು ಕರ್ತವ್ಯದಿಂದ ಗೈರು ಹಾಜರಾಗಿದ್ದಕ್ಕಾಗಿ ಅವರ ವಿರುದ್ಧ ಇಲಾಖಾ ವ್ಯವಹರಣೆಗಳನ್ನು ಸಹ ಹೂಡಲಾಗಿತ್ತು.

1962ರ ಗೃಹ ರಕ್ಷಕದಳ ಅಧಿನಿಯಮ (1962ರ ಕರ್ನಾಟಕ ಅಧಿನಿಯಮ 35) ದಲ್ಲಿ ಗೃಹ ರಕ್ಷಕರಿಗೆ ಅಂಥ ಆಕಸ್ಮಿಕ ಸಂದರ್ಭಗಳಲ್ಲಿ ರಕ್ಷಣೆ ನೀಡಲು ಯಾವ ಉಪಬಂಧವೂ ಇರುವುದಿಲ್ಲ. ಆದ್ದರಿಂದ, ಕರೆಗೆ ಹಾಜರಾಗುವ ಉದ್ಯೋಗಿಗಳಿಗೆ ವೇತನ, ಮಜೂರಿ ಇತ್ಯಾದಿ ಕಡಿತದಿಂದ ರಕ್ಷಣೆ ನೀಡುವ ದೃಷ್ಟಿಯಿಂದ ಗೃಹ ರಕ್ಷಕ ಕರ್ತವ್ಯದ ಮೇಲಿರುವಾಗ ಅವರ ಕಚೇರಿಗಳಿಂದ ಗೈರು ಹಾಜರಾದ ಅವಧಿಯನ್ನು ವೇತನದ ಮೇಲಿನ ಕರ್ತವ್ಯವೆಂದು ಅವರು ಅರ್ಹರಾಗಿರುವ ವೇತನ ಮತ್ತು ಭತ್ಯೆಯನ್ನು ವೃತ್ತಿ ನಿರತ ಸ್ಥಳದಲ್ಲಿ ಅವರು ಕೆಲಸದ ಮೇಲಿದ್ದರೆ ಹೇಗೋ ಹಾಗೆ ನೀಡುವುದು ನಿಯೋಜಕರ ಪಾಲಿನ ಹೊಣೆಗಾರಿಕೆಯನ್ನಾಗಿ ಮಾಡಲು ಒಂದು ಉಪಬಂಧ ಕಲ್ಪಿಸುವುದು ಅವಶ್ಯವೆಂದು ಭಾವಿಸಲಾಯಿತು.

ಕರ್ನಾಟಕ ವಿಧಾನ ಮಂಡಲವು ಅಧಿವೇಶನದಲ್ಲಿಲ್ಲದಿದ್ದುದರಿಂದ, ಕರ್ನಾಟಕ ಗೃಹ ರಕ್ಷಕದಳ (ತಿದ್ದುಪಡಿ) ಅಧ್ಯಾದೇಶ, 1977ನ್ನು ಪ್ರಖ್ಯಾಪಿಸಲಾಯಿತು.

ಸದರಿ ಆಧ್ಯಾದೇಶದ ಬದಲಿಗೆ ಈ ವಿಧೇಯಕವನ್ನು ಮಂಡಿಸಲು ಉದ್ದೇಶಿಸಿದೆ.

(ದಿನಾಂಕ 26ನೇ ಮಾರ್ಚ್ 1977ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ IV-2ಎನಲ್ಲಿ, ಸಂಖ್ಯೆ 235 ಆಗಿ ಪುಟ 4ರಲ್ಲಿ ಪ್ರಕಟವಾಗಿದೆ.)

## III

2003ರ ತಿದ್ದುಪಡಿ ಮಾಡುವ ಅಧಿನಿಯಮ 19.– ಕರ್ನಾಟಕ ಗೃಹ ರಕ್ಷಕ ದಳ ಅಧಿನಿಯಮ, 1962ನ್ನು (1962ರ ಕರ್ನಾಟಕ ಅಧಿನಿಯಮ 35) ಈ ಮುಂದಿನ ವಿಷಯಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ,–

(i) ಗೃಹ ರಕ್ಷಕ ದಳದ ಕಮಾಂಡೆಂಟರ ಆಯ್ಕೆ ಮತ್ತು ನೇಮಕಾತಿಯ ಕಾರ್ಯವಿಧಾನ;

(ii) ಗೃಹ ರಕ್ಷಕ ದಳದ ಕಮಾಂಡೆಂಟರ ವಿದ್ಯಾರ್ಹತೆ, ಸೇವಾ ಷರತ್ತುಗಳು ಮತ್ತು ಪದಾವಧಿ. ಆನುಷಂಗಿಕ ತಿದ್ದುಪಡಿಗಳನ್ನು ಮಾಡಲು ಸಹ ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2003ರ ವಿಧಾನ ಸಭಾ ವಿಧೇಯಕ ಸಂಖ್ಯೆ 1)

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಎರಡನೇ ಪಟ್ಟಿಯ 1 ಮತ್ತು 2ನೇ ನಮೂದು]

(ದಿನಾಂಕ 22.4.2003ರ ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯ ಭಾಗ IV– 2 ಎ ನಲ್ಲಿ ಸಂಖ್ಯೆ 421 ಆಗಿ ಪ್ರಕಟವಾಗಿದೆ.)

1962ರ [1][ಕರ್ನಾಟಕ ಅಧಿನಿಯಮ][1] ಸಂಖ್ಯೆ 35

(1962ರ ಡಿಸೆಂಬರ್ ಇಪ್ಪತ್ತೇಳನೆಯ ದಿನಾಂಕದಂದು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಮೊದಲ ಬಾರಿಗೆ ಪ್ರಕಟವಾಯಿತು.)

# [1][ಕರ್ನಾಟಕ][1] ಗೃಹ ರಕ್ಷಕ ದಳ ಅಧಿನಿಯಮ, 1962

(1962ರ ಡಿಸೆಂಬರ್ ಹದಿನೆಂಟನೆಯ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ಪಡೆದಿದೆ.)

(1977ರ 11ಮತ್ತು 2003ರ 19 – ಈ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ)

[1][ಕರ್ನಾಟಕ ರಾಜ್ಯ][1] ದಲ್ಲಿ ಗೃಹ ರಕ್ಷಕ ದಳಗಳ ರಚನೆಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

[1][ಕರ್ನಾಟಕ ರಾಜ್ಯ][1] ದಲ್ಲಿ ತುರ್ತು ಸ್ಥಿತಿಗಳಲ್ಲಿ ಮತ್ತು ಇತರೆ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಒಂದು ಸ್ವಯಂ ಸೇವಾ ಸಂಘಟನೆಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿಮೂರನೆಯ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನಮಂಡಲದಿಂದ ಇದನ್ನು ಮುಂದಿನಂತೆ ಅಧಿನಿಯಮಿಸಲಾಗಿದೆ, ಎಂದರೆ:–

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.–** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಗೃಹ ರಕ್ಷಕ ದಳ ಅಧಿನಿಯಮ, 1962 ಎಂದು ಕರೆಯತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಗೃಹ ರಕ್ಷಕ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ಗೃಹ ರಕ್ಷಕ ಎಂದು ನೇಮಕಗೊಂಡ ಒಬ್ಬ ವ್ಯಕ್ತಿ;

(ಬಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು.

**3. ಗೃಹ ರಕ್ಷಕ ದಳದ ರಚನೆ ಮತ್ತು ಕಮಾಂಡೆಂಟ್ ಜನರಲ್ ಮತ್ತು ಕಮಾಡೆಂಟರ ನೇಮಕಾತಿ.–**

(1) ರಾಜ್ಯ ಸರ್ಕಾರವು "ಗೃಹ ರಕ್ಷಕ ದಳ" ಎಂದು ಕರೆಯಲಾಗುವ ಒಂದು ಸ್ವಯಂ ಸೇವಾ ನಿಕಾಯವನ್ನು ರಚಿಸತಕ್ಕದ್ದು, ಈ ಸಂಸ್ಥೆಯ ಸದಸ್ಯರು ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಿಗನುಸಾರವಾಗಿ ಸಂದರ್ಭಾನುಸಾರ ಅವರಿಗೆ ವಹಿಸಬಹುದಾದಂಥ ವ್ಯಕ್ತಿಗಳ ರಕ್ಷಣೆ, ಸ್ವತ್ತುಗಳ ಭದ್ರತೆ ಮತ್ತು ಸಾರ್ವಜನಿಕ ಸುವ್ಯವಸ್ಥೆ ಮತ್ತು ನೆಮ್ಮದಿಯನ್ನು ಕಾಪಾಡುವ ಸಂಬಂಧದಲ್ಲಿ ಅಂಥ ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(2) [1][ರಾಜ್ಯ ಸರ್ಕಾರವು, (2ಬಿ) ಉಪಪ್ರಕರಣದ ಅಡಿಯಲ್ಲಿ ಸಮಿತಿಯು ಕಳುಹಿಸಿದ ಅರ್ಹ ವ್ಯಕ್ತಿಗಳ ಪಟ್ಟಿಯಿಂದ][1] ಗೃಹ ರಕ್ಷಕ ದಳದ ಸರಿಯಾದ ಆಡಳಿತ ಮತ್ತು ನಿರ್ವಹಣೆಗಾಗಿ ಅವಶ್ಯಕ ಎಂದು ಪರಿಗಣಿಸಿದಷ್ಟು ಸಂಖ್ಯೆಯ ಕಮಾಂಡೆಂಟರುಗಳನ್ನು ನೇಮಕ ಮಾಡಬಹುದು ಮತ್ತು ಅಂಥ ಪ್ರತಿಯೊಬ್ಬ ಕಮಾಂಡೆಂಟನು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕ ಪ್ರದೇಶಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

1. 2003ರ ಅಧಿನಿಯಮ 19ರ ಮೂಲಕ 22.4.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2ಎ) (2)ನೇ ಉಪಪ್ರಕರಣದ ಅಡಿಯಲ್ಲಿ ಕಮಾಂಡೆಂಟರಾಗಿ ನೇಮಕ ಹೊಂದಲು ನಿಯಮಿಸಲಾದ ಅರ್ಹತೆಯನ್ನು ಹೊಂದಿರುವ ವ್ಯಕ್ತಿಗಳನ್ನು ಆಯ್ಕೆ ಮಾಡುವುದಕ್ಕಾಗಿ ಈ ಮುಂದಿನ ಸದಸ್ಯರನ್ನು ಒಳಗೊಂಡಿರುವ ಒಂದು ಸಮಿತಿ ಇರತಕ್ಕದ್ದು, ಎಂದರೆ:–

(ಎ) ಸರ್ಕಾರದ ಕಾರ್ಯದರ್ಶಿ, ಒಳಾಡಳಿತ ಮತ್ತು ಸಾರಿಗೆ ಇಲಾಖೆ.

(ಬಿ) ಕಮಾಂಡೆಂಟ್ ಜನರಲ್, ಗೃಹ ರಕ್ಷಕ ದಳ ಮತ್ತು ನಾಗರಿಕ ರಕ್ಷಣೆ.

(ಸಿ) ಡೆಪ್ಯೂಟಿ ಕಮಾಂಡೆಂಟ್ ಜನರಲ್, ಗೃಹ ರಕ್ಷಕ ದಳ ಮತ್ತು ನಾಗರಿಕ ರಕ್ಷಣೆ.

(2ಬಿ) (2ಎ) ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸಮಿತಿಯು, ನಿಯಮಿಸಬಹುದಾದಂಥ ಕಾರ್ಯ ವಿಧಾನವನ್ನು ಅನುಸರಿಸಿದ ತರುವಾಯ, (2)ನೇ ಉಪಪ್ರಕರಣದ ಅಡಿಯಲ್ಲಿ ಕಮಾಂಡೆಂಟರಾಗಿ ನೇಮಕ ಹೊಂದಲು ಅರ್ಹರಾದ ವ್ಯಕ್ತಿಗಳ ಒಂದು ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅಂಥ ಅರ್ಹ ವ್ಯಕ್ತಿಗಳ ಪಟ್ಟಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(2ಸಿ) ರಾಜ್ಯ ಸರ್ಕಾರದ ಇಚ್ಛೆಗೆ ಒಳಪಟ್ಟು, ಕಮಾಂಡೆಂಟರ ಪದಾವಧಿಯು ಸಾಮಾನ್ಯವಾಗಿ ಐದು ವರ್ಷಗಳ ಒಂದು ಅವಧಿಗಾಗಿ ಇರತಕ್ಕದ್ದು ಮತ್ತು ಅದನ್ನು ಐದು ವರ್ಷಗಳ ಒಂದು ಹೆಚ್ಚಿನ ಅವಧಿಗಾಗಿ ವಿಸ್ತರಿಸಬಹುದು.

(2ಡಿ) ಕಮಾಂಡೆಂಟನ ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.][1]

1. 2003ರ ಅಧಿನಿಯಮ 19ರ ಮೂಲಕ 22.4.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) ರಾಜ್ಯ ಸರ್ಕಾರವು ರಾಜ್ಯದ ಗೃಹ ರಕ್ಷಕ ದಳದ ಕಮಾಂಡೆಂಟ್ ಜನರಲ್‌ನನ್ನು ನೇಮಕ ಮಾಡಿ ಅವನಿಗೆ ರಾಜ್ಯದ ಎಲ್ಲ ಗೃಹ ರಕ್ಷಕ ದಳದ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ವಹಿಸತಕ್ಕದ್ದು.

**4. ಸದಸ್ಯರ ನೇಮಕಾತಿ.–** (1) ಕಮಾಂಡೆಂಟ್ ಜನರಲ್‌ರ ಅನುಮೋದನೆಗೊಳಪಟ್ಟು, ಕಮಾಂಡೆಂಟರು ಸೇವೆಗೆ ಅರ್ಹರಾದ ಮತ್ತು ಇಚ್ಛೆಯುಳ್ಳಂಥ ಮತ್ತು ರಾಜ್ಯ ಸರ್ಕಾರವು ಕಾಲ ಕಾಲಕ್ಕೆ ನಿರ್ಧರಿಸಬಹುದಾದಷ್ಟು ಸಂಖ್ಯೆಯ ವ್ಯಕ್ತಿಗಳನ್ನು ಗೃಹ ರಕ್ಷಕ ದಳದ ಸದಸ್ಯರನ್ನಾಗಿ ಗೃಹ ರಕ್ಷಕ ದಳದ ಯಾವುದೇ ಕಮಾಂಡರ್ ಕಚೇರಿಗೆ ಅಂಥ ಯಾರೇ ಸದಸ್ಯರನ್ನು ನೇಮಕ ಮಾಡಿಕೊಳ್ಳಬಹುದು.

(2) (1)ನೇ ಉಪಪ್ರಕರಣದದಲ್ಲಿ ಏನೇ ಒಳಗೊಂಡಿದ್ದರೂ, ಕಮಾಂಡೆಂಟ್ ಜನರಲ್‌ರವರು ತಮ್ಮ ನಿಯಂತ್ರಣದಡಿಯಲ್ಲಿನ ಯಾವುದೇ ಹುದ್ದೆಗೆ ಗೃಹ ರಕ್ಷಕ ದಳದ ಒಬ್ಬ ಸದಸ್ಯನನ್ನು ನೇಮಕ ಮಾಡಿಕೊಳ್ಳಬಹುದು.

(3) ಗೃಹ ರಕ್ಷಕ ದಳದ ಪ್ರತಿಯೊಬ್ಬ ಸದಸ್ಯನು ನೇಮಕಾತಿಯ ತರುವಾಯ, ನೇಮಕಾತಿ ಪ್ರಮಾಣ ಪತ್ರವನ್ನು ಸ್ವೀಕರಿಸತಕ್ಕದ್ದು. ಅದನ್ನು ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ನಿಯಮಿಸಬಹುದಾದ ಅಂಥ ಪ್ರಾಧಿಕಾರಿಯು ನೀಡಿರತಕ್ಕದ್ದು ಮತ್ತು ಆ ನಂತರ ಅವನು ಒಬ್ಬ ಗೃಹ ರಕ್ಷಕನಿಗೆ ಈ ಅಧಿನಿಯಮದಿಂದ ಅಥವಾ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ರಕ್ಷಣೆಯನ್ನು ಹೊಂದಿರತಕ್ಕದ್ದು ಮತ್ತು ವಿಧಿಸಲಾದ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**5. ಸದಸ್ಯರ ಪ್ರಕಾರ್ಯಗಳು ಮತ್ತು ಕರ್ತವ್ಯಗಳು.–** (1) ಕಮಾಂಡೆಂಟ್ ಜನರಲ್‌ರನು, ಗೃಹ ರಕ್ಷಕ ದಳದ ಯಾರೇ ಸದಸ್ಯನನ್ನು ಯಾವುದೇ ಕಾಲದಲ್ಲಿ ತರಬೇತಿಗಾಗಿ ಅಥವಾ ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗನುಸಾರವಾಗಿ ರಾಜ್ಯದ ಯಾವುದೇ ಭಾಗದಲ್ಲಿ ಗೃಹ ರಕ್ಷಕ ದಳಕ್ಕೆ ವಹಿಸಲಾದ ಯಾವುದೇ ಪ್ರಕಾರ್ಯಗಳನ್ನು ಅಥವಾ ಕರ್ತವ್ಯಗಳನ್ನು ನಿರ್ವಹಿಸಲು ಕರೆಯಬಹುದು.

(2) ಕಮಾಂಡೆಂಟನು, ಯಾವುದೇ ಕಾಲದಲ್ಲಿ ಗೃಹ ರಕ್ಷಕ ದಳದ ಸದಸ್ಯನನ್ನು ತರಬೇತಿಗಾಗಿ ಅಥವಾ ಈ ಅಧಿನಿಯಮದಿಂದ ಅಥವಾ ಅಡಿಯಲ್ಲಿ ಅವನಿಗೆ ವಹಿಸಲಾದ ಯಾವುದೇ ಪ್ರಕಾರ್ಯಗಳನ್ನು ಅಥವಾ ಕರ್ತವ್ಯಗಳನ್ನು ನಿರ್ವಹಿಸಲು ಆಹ್ವಾನಿಸಬಹುದು.

(3) ಒಂದು ಜಿಲ್ಲೆಯ ಜಿಲ್ಲಾಧಿಕಾರಿಯು ಅಥವಾ ಪೋಲೀಸ್ ಅಧೀಕ್ಷಕನು ಯಾವುದೇ ಕಾಲದಲ್ಲಿ ಈ ಅಧಿನಿಯಮದಿಂದ ಅಥವಾ ಅಡಿಯಲ್ಲಿ ಅವನಿಗೆ ವಹಿಸಲಾದ ಯಾವುದೇ ಪ್ರಕಾರ್ಯಗಳನ್ನು ಅಥವಾ ಕರ್ತವ್ಯಗಳನ್ನು ನಿರ್ವಹಿಸಲು ಗೃಹ ರಕ್ಷಕ ದಳದ ಸದಸ್ಯನನ್ನು ಕರೆಯಬಹುದು.

[1][**5ಎ. ಗೃಹ ರಕ್ಷಕ ದಳದವರು ಕರ್ತವ್ಯಕ್ಕೆ ಹಾಜರಾಗಲು ಅನುಮತಿಸಲು ನಿಯೋಜಕನ ಹೊಣೆಗಾರಿಕೆ.–** (1) ಪ್ರತಿಯೊಬ್ಬ ನಿಯೋಜಕನು ತತ್ಕಾಲದಲ್ಲಿ ತನ್ನಿಂದ ಅಥವಾ ತನ್ನ ಅಡಿಯಲ್ಲಿ ನಿಯೋಜಿತನಾದ ಒಬ್ಬ ಗೃಹ ರಕ್ಷಕ ದಳದವನನ್ನು ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಗೃಹ ರಕ್ಷಕ ದಳದ ಕರ್ತವ್ಯಗಳಿಗೆ ಹಾಜರಾಗಲು ಅನುಮತಿಸತಕ್ಕದ್ದು. ಯಾವುದೇ ಕಾನೂನು ಅಥವಾ ಅವನ ಮತ್ತು ಅಂಥ ಗೃಹ ರಕ್ಷಕ ದಳದವನ ನಡುವಣ ಒಪ್ಪಂದದಲ್ಲಿ ಏನೇ ಇದ್ದಾಗ್ಯೂ, ನಿಯೋಜಕನು, ಅಂಥ ಗೃಹ ರಕ್ಷಕನನ್ನು ಅಂಥ ಕರ್ತವ್ಯಕ್ಕೆ ಹಾಜರಾಗಲು ಕರೆಯದೆ ಇದ್ದರೆ ಗೃಹ ರಕ್ಷಕದಳವನಾಗಿ ಅವನ ಕರ್ತವ್ಯದ ಅವಧಿಗೆ ಅವನು ಪಡೆಯುತ್ತಿದ್ದ ಆದರೆ ಈ ಅವಧಿಯು ಒಂದು ವರ್ಷದಲ್ಲಿ 60 ದಿನಗಳನ್ನು ಮೀರದಂತೆ ವೇತನ ಮತ್ತು ಭತ್ಯೆಗಳನ್ನು ಸಂದಾಯ ಮಾಡಲು ಬದ್ಧವಾಗಿರತಕ್ಕದ್ದು.

**ವಿವರಣೆ:–** ಈ ಉಪ ಪ್ರಕರಣದ ಉದ್ದೇಶಕ್ಕಾಗಿ ಕರ್ತವ್ಯ ಎಂಬುದರಲ್ಲಿ ಅಂಥ ಗೃಹ ರಕ್ಷಕನ ಯಾವುದೇ ತರಬೇತಿಯು ಒಳಗೊಳ್ಳುತ್ತದೆ.

(2) ಯಾರೇ ನಿಯೋಜಕನು ಯಾರೇ ನೌಕರನನ್ನು ಅವನು ಗೃಹ ರಕ್ಷಕ ದಳದ ಸದಸ್ಯನಾಗಿದ್ದಾನೆ ಎಂಬ ಕಾರಣ ಮಾತ್ರದಿಂದಲೇ ಪೂರ್ವಾಗ್ರಹ ಪೀಡಿತನಾಗಿ ವಜಾ ಮಾಡತಕ್ಕದ್ದಲ್ಲ, ತೆಗೆದುಹಾಕತಕ್ಕದ್ದಲ್ಲ ಅಥವಾ ಅಮಾನತು ಗೊಳಿಸತಕ್ಕದ್ದಲ್ಲ ಅಥವಾ ಯಾವುದೇ ಇತರೆ ಕ್ರಮ ಜರುಗಿಸತಕ್ಕದ್ದಲ್ಲ.

(3) (1)ನೇ ಅಥವಾ (2)ನೇ ಉಪಪ್ರಕರಣದ ಉಪಬಂಧಗಳನ್ನು ಯಾರಾದರೂ ಉಲ್ಲಂಘಿಸಿದರೆ ಅವನನ್ನು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ದಂಡಿಸತಕ್ಕದ್ದು.

(4) ಯಾರೇ ನೌಕರನು ಅಥವಾ ಅಂಥ ನೌಕರನಿಗೆ ಸಂಬಂಧಿಸಿದ ಕಮಾಂಡೆಂಟ್‌ನ ಮೂಲಕ ಆ ನೌಕರನು, ಅಂಥ ನಿಯೋಜಕನಲ್ಲಿ ನಿಯೋಜನೆಗಾಗಿ ಅರ್ಜಿ ಸಲ್ಲಿಸುವಾಗ, ಅವನು ಒಬ್ಬ ಗೃಹ ರಕ್ಷಕನೆಂದು ತಿಳಿಸಿದ್ದ ಹೊರತು ಅಥವಾ ಹಾಗೆ ನೌಕರನಾಗಿರುವ ಸಮಯದಲ್ಲಿ ಗೃಹ ರಕ್ಷಕ ದಳದ ಒಬ್ಬ ಸದಸ್ಯನಾಗಿ ಭರ್ತಿಯಾದಾಗ ಆ ಬಗ್ಗೆ ತಿಳಿಸಿದ್ದ ಹೊರತು, ಈ ಪ್ರಕರಣದಲ್ಲಿ ಇರುವುದಾವುದೂ ಆ ಯಾರೇ ನಿಯೋಜಕನಿಗೆ ಅನ್ವಯಿಸತಕ್ಕದ್ದಲ್ಲ.][1]

1. 5ಎ ಪ್ರಕರಣವನ್ನು 28.1.1977 ರಿಂದ ಜಾರಿಗೆ ಬರುವಂತೆ 1977ರ ಅಧಿನಿಯಮ 11ರ ಮೂಲಕ ಸೇರಿಸಲಾಗಿದೆ.

**6. ಅಧಿಕಾರಗಳು, ರಕ್ಷಣೆ ಮತ್ತು ನಿಯಂತ್ರಣ.–** (1) ಗೃಹ ರಕ್ಷಕ ದಳದ ಒಬ್ಬ ಸದಸ್ಯನನ್ನು 5ನೇ ಪ್ರಕರಣದ ಅಡಿಯಲ್ಲಿ ಕರೆದಿರುವಾಗ ಅವನು [1][ಕರ್ನಾಟಕ ಪೊಲೀಸ್ ಅಧಿನಿಯಮ, 1963][1]ರ ಅಡಿಯಲ್ಲಿ ನೇಮಕನಾದ ಪೊಲೀಸ್ ಅಧಿಕಾರಿಗಿರುವಂಥವೇ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ರಕ್ಷಣೆಗಳನ್ನು ಹೊಂದಿರತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಗೃಹ ರಕ್ಷಕ ದಳದ ಸದಸ್ಯನಾಗಿ ತನ್ನ ಅಧಿಕಾರಗಳನ್ನು ಚಲಾಯಿಸುವಾಗ ಅಥವಾ ಅವನ ಪ್ರಕಾರ್ಯಗಳನ್ನು ಅಥವಾ ಕರ್ತವ್ಯಗಳನ್ನು ನಿರ್ವಹಿಸುವಾಗ ಮಾಡಿದ ಅಥವಾ ಮಾಡಲುದ್ದೇಶಿಸಿದ ಯಾವುದರ ಬಗ್ಗೆಯೂ ಅದಕ್ಕೆ ಕಮಾಂಡೆಂಟ್ ಜನರಲ್‌ನ ಪೂರ್ವಾನುಮತಿ ಪಡೆದಿದ್ದ ಹೊರತು ಗೃಹ ರಕ್ಷಕ ದಳದ ಸದಸ್ಯನ ವಿರುದ್ಧ ಯಾವುದೇ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**7. ಪೊಲೀಸ್ ದಳದ ಅಧಿಕಾರಿಗಳಿಂದ ನಿಯಂತ್ರಣ.–** ಪೊಲೀಸ್ ದಳದ ನೆರವಿಗಾಗಿ 5ನೇ ಪ್ರಕರಣದ ಅಡಿಯಲ್ಲಿ ಗೃಹ ರಕ್ಷಕ ದಳದ ಸದಸ್ಯರನ್ನು ಕರೆದಿರುವಾಗ ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಷ್ಟರಮಟ್ಟಿಗೆ ಪೊಲೀಸ್ ದಳದ ಅಧಿಕಾರಿಗಳ ನಿಯಂತ್ರಣದಲ್ಲಿರತಕ್ಕದ್ದು.

**8. ಸದಸ್ಯನಾಗಿರುವುದು ನಿಂತು ಹೋದ ನಂತರ ಪ್ರಮಾಣ ಪತ್ರ, ಆಯುಧಗಳು, ಇತ್ಯಾದಿಗಳನ್ನು ಹಿಂದಕ್ಕೆ ಒಪ್ಪಿಸುವುದು.–** (1) ಯಾವುದೇ ಕಾರಣಕ್ಕಾಗಿ ಗೃಹ ರಕ್ಷಕ ದಳದ ಸದಸ್ಯನಾಗಿರುವುದು ನಿಂತು ಹೋಗಿರುವ ಅಥವಾ ತನ್ನ ಸದಸ್ಯತ್ವಕ್ಕೆ ರಾಜಿನಾಮೆ ಸಲ್ಲಿಸಿದ ಯಾರೇ ವ್ಯಕ್ತಿಯು ಕಮಾಂಡೆಂಟ್‌ನಿಗೆ ಅಥವಾ ಕಮಾಂಡೆಂಟ್‌ನು ನಿರ್ದೇಶಿಸಿದ ಅಂಥ ವ್ಯಕ್ತಿಗೆ ಮತ್ತು ಅಂಥ ಸ್ಥಳದಲ್ಲಿ ಅವನ ನೇಮಕಾತಿಯ ಅಥವಾ ಪದದ ಪ್ರಮಾಣಪತ್ರ ಮತ್ತು ಅಂಥ ಸದಸ್ಯನಾಗಿ ಅವನಿಗೆ ನೀಡಲಾದ ಆಯುಧಗಳು, ವಿಶೇಷ ಉಡುಗೆ ತೊಡುಗೆಗಳು, ಬಟ್ಟೆಗಳು ಅಥವಾ ಇತರೆ ವಸ್ತುಗಳನ್ನು ಕೂಡಲೇ ಹಿಂದಕ್ಕೆ ಒಪ್ಪಿಸತಕ್ಕದ್ದು.

(2) ಯಾರೇ ಮ್ಯಾಜಿಸ್ಟ್ರೇಟನು ಮತ್ತು ಉಪಪೊಲೀಸ್ ಅಧೀಕ್ಷಕ ಅಥವಾ ಸಹಾಯಕ ಪೊಲೀಸ್ ಅಧೀಕ್ಷಕ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಯಾರೇ ಪೊಲೀಸ್ ಅಧಿಕಾರಿಯು, ಆ ಸಮಯದಲ್ಲಿ ವಿಶೇಷ ಕಾರಣಗಳನ್ನು ಲಿಖಿತದಲ್ಲಿ ದಾಖಲು ಮಾಡಿ ಹಾಗೆ ಹಿಂದಕ್ಕೆ ಒಪ್ಪಿಸದಿರುವ ಯಾವುದೇ ಪ್ರಮಾಣ ಪತ್ರ, ಆಯುಧಗಳು, ವಿಶೇಷ ಉಡುಗೆ ತೊಡಿಗೆಗಳು, ಬಟ್ಟೆ ಅಥವಾ ಇತರೆ ಅಗತ್ಯ ವಸ್ತುಗಳನ್ನು ಶೋಧಿಸಲು ಮತ್ತು ಅವುಗಳು ದೊರೆಯಬಹುದಾದಲ್ಲಿಂದ ಅವುಗಳನ್ನು ವಶಪಡಿಸಿಕೊಳ್ಳಲು ಒಂದು ವಾರೆಂಟನ್ನು ಹೊರಡಿಸಬಹುದು. ಹೀಗೆ ಹೊರಡಿಸಿದ ಪ್ರತಿ ವಾರೆಂಟನ್ನೂ [1][1973ರ ದಂಡ ಪ್ರಕ್ರಿಯಾ ಸಂಹಿತೆ][1] ಯ ಉಪಬಂಧಗಳಿಗನುಸಾರವಾಗಿ ಒಬ್ಬ ಪೊಲೀಸ್ ಅಧಿಕಾರಿಯು ಅಥವಾ ಮ್ಯಾಜಿಸ್ಟ್ರೇಟನು ಅಥವಾ ವಾರೆಂಟುಗಳನ್ನು ನೀಡುವ ಪೊಲೀಸ್ ಅಧಿಕಾರಿಯು ಹಾಗೆ ನಿರ್ದೇಶಿಸಿದ ಯಾರೇ ಇತರ ವ್ಯಕ್ತಿಯ ಮೂಲಕ ಕಾರ್ಯಗತಗೊಳಿಸತಕ್ಕದ್ದು.

1. 2003ರ ಅಧಿನಿಯಮ 19ರ ಮೂಲಕ 22.4.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಕಮಾಂಡೆಂಟ್ ಜನರಲ್‌ನ ಆದೇಶದ ಅಡಿಯಲ್ಲಿನ ಯಾವುದೇ ವಸ್ತುವನ್ನು, ಯಾವ ವ್ಯಕ್ತಿಗೆ ಅದನ್ನು ನೀಡಲಾಗಿದೆಯೋ ಅದು ಆ ವ್ಯಕ್ತಿಯ ಸ್ವತ್ತಾಗಿದ್ದರೆ ಈ ಪ್ರಕರಣದಲ್ಲಿ ಇರುವುದಾವುದೂ ಅದಕ್ಕೆ ಅನ್ವಯವಾಗುವುದಿಲ್ಲ ಎಂದು ಭಾವಿಸತಕ್ಕದ್ದು.

**9. ಕರ್ತವ್ಯ ನಿರ್ಲಕ್ಷ್ಯ, ಇತ್ಯಾದಿಗಳಿಗಾಗಿ ಸದಸ್ಯರಿಗೆ ಶಿಕ್ಷೆ.–** (1) ಕಮಾಂಡೆಂಟ್‌ನು, ತನ್ನ ನಿಯಂತ್ರಣ ದಲ್ಲಿರುವ ಗೃಹ ರಕ್ಷಕ ದಳದ ಯಾರೇ ಸದಸ್ಯನಿಗೆ, ಅಂಥ ಸದಸ್ಯನು ಗೃಹ ರಕ್ಷಕ ದಳದ ಸದಸ್ಯನಾಗಿ ತನ್ನ ಪ್ರಕಾರ್ಯಗಳನ್ನು ಅಥವಾ ಕರ್ತವ್ಯಗಳನ್ನು ನಿರ್ವಹಿಸಲು ಅಥವಾ ಅವನ ಪ್ರಕಾರ್ಯಗಳ ಮತ್ತು ಕರ್ತವ್ಯಗಳ ಪಾಲನೆಗಾಗಿ ಅವನಿಗೆ ನೀಡಲಾದ ಯಾವುದೇ ಕಾನೂನು ಸಮ್ಮತ ಆದೇಶವನ್ನು ಅಥವಾ ನಿರ್ದೇಶನವನ್ನು ಪಾಲಿಸಲು ನಿರ್ಲಕ್ಷ್ಯ ತೋರಿದರೆ ಅಥವಾ ನಿರಾಕರಿಸಿದರೆ ಅಥವಾ ಯಾವುದೇ ಶಿಸ್ತು ಉಲ್ಲಂಘನೆಯ ಅಥವಾ ದುರ್ನಡತೆಯ ತಪ್ಪಿತಸ್ಥನಾದರೆ, ಅವನನ್ನು ಅಮಾನತು ಮಾಡುವ, ಕೆಳದರ್ಜೆಗೆ ಇಳಿಸುವ ಅಥವಾ ವಜಾ ಮಾಡುವ ಅಥವಾ ಐವತ್ತು ರೂಪಾಯಿಗಳಿಗೆ ಮೀರದ ದಂಡವನ್ನು ವಿಧಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(2) ಕಮಾಂಡೆಂಟ್ ಜನರಲ್‌ನು, ತನ್ನ ನಿಯಂತ್ರಣದಲ್ಲಿರುವ ಒಂದು ಹುದ್ದೆಗೆ ನಿಯೋಜಿತನಾದ ಗೃಹ ರಕ್ಷಕ ದಳದ ಯಾರೇ ಸದಸ್ಯನ ಸಂಬಂಧದಲ್ಲಿ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ದಂಡವನ್ನು ವಿಧಿಸಬಹುದು ಮತ್ತು ಗೃಹ ರಕ್ಷಕ ದಳದ ಯಾರೇ ಸದಸ್ಯನನ್ನು ಕ್ರಿಮಿನಲ್ ಆರೋಪದ ಮೇಲೆ ಅವನು ಅಪರಾಧ ನಿರ್ಣೀತನಾದ ವರ್ತನೆಯ ಕಾರಣದ ಮೇಲೆ ಸಹ ವಜಾ ಮಾಡಬಹುದು.

(3) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕಮಾಂಡೆಂಟ್ ಜನರಲ್‌ನು ಅಥವಾ ಕಮಾಂಡೆಂಟನು, ಇನ್ನು ಮುಂದೆ ಗೃಹ ರಕ್ಷಕ ದಳದ ಯಾರೇ ಸದಸ್ಯನ ಸೇವೆಯು ಅಗತ್ಯವಿಲ್ಲವೆಂದು ಅಭಿಪ್ರಾಯಪಟ್ಟರೆ, ಕಮಾಂಡೆಂಟ್ ಜನರಲ್‌ನು ಅಥವಾ ಸಂದರ್ಭಾನುಸಾರ ಕಮಾಂಡೆಂಟನು ಅಂಥ ಯಾರೇ ಸದಸ್ಯನನ್ನು ಯಾವುದೇ ಸಮಯದಲ್ಲಿ ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ವಜಾ ಮಾಡಬಹುದು.

(4) ಕಮಾಂಡೆಂಟ್ ಜನರಲ್‌ನು ಅಥವಾ ಕಮಾಂಡೆಂಟನು (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಅಡಿಯಲ್ಲಿ ಗೃಹ ರಕ್ಷಕ ದಳದ ಯಾರೇ ಸದಸ್ಯನನ್ನು ಅಮಾನುತುಗೊಳಿಸುವ, ಕೆಳದರ್ಜೆಗೆ ಇಳಿಸುವ, ವಜಾ ಮಾಡುವ ಅಥವಾ ದಂಡ ವಿಧಿಸುವ ಒಂದು ಆದೇಶವನ್ನು ಹೊರಡಿಸಿದಾಗ, ಅವನು ಅಂಥ ಆದೇಶವನ್ನು ಮತ್ತು ಅದಕ್ಕೆ ಕಾರಣಗಳನ್ನು ದಾಖಲಿಸತಕ್ಕದ್ದು ಮತ್ತು ಕಮಾಂಡೆಂಟ್ ಜನರಲ್‌ನು ಅಥವಾ ಕಮಾಂಡೆಂಟನು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಒಂದು ಸೂಕ್ತ ಅವಕಾಶವನ್ನು ನೀಡಿದ ಹೊರತು ಅಂಥ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(5) (ಎ) ಕಮಾಡೆಂಟನ ಆದೇಶದಿಂದ ಬಾಧಿತನಾದ ಗೃಹ ರಕ್ಷಕ ದಳದ ಯಾರೇ ಸದಸ್ಯನು ಅಂಥ ಆದೇಶದ ವಿರುದ್ಧ ಕಮಾಂಡೆಂಟ್ ಜನರಲ್‌ನಿಗೆ ಅಪೀಲು ಸಲ್ಲಿಸಬಹುದು ಮತ್ತು ಕಮಾಡೆಂಟ್ ಜನರಲ್‌ನ ಅಂಥ ಆದೇಶದಿಂದ ಬಾಧಿತನಾದ ಗೃಹ ರಕ್ಷಕ ದಳದ ಯಾರೇ ಸದಸ್ಯನು ಅಂಥ ಆದೇಶದ ವಿರುದ್ಧ ರಾಜ್ಯ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು.

(ಬಿ) (ಎ) ಖಂಡದ ಅಡಿಯಲ್ಲಿನ ಅಪೀಲನ್ನು, ಆ ಗೃಹ ರಕ್ಷಕ ದಳದ ಸದಸ್ಯನಿಗೆ ಅಂಥ ಆದೇಶವು ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸಲ್ಲಿಸತಕ್ಕದ್ದು.

(6) ಕಮಾಂಡೆಂಟ್ ಜನರಲ್‌ನು ಅಥವಾ ರಾಜ್ಯ ಸರ್ಕಾರವು ಸ್ವತ: ತಾನೇ ಅಥವಾ ಅರ್ಜಿಯ ಮೇಲೆ ತನಗೆ ಅಥವಾ ಅದಕ್ಕೆ ಅಧೀನನಾದ ಯಾರೇ ಅಧಿಕಾರಿಯು ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಯಾವುದೇ ಆದೇಶದ ದಾಖಲೆಯನ್ನು ಅಂಥ ಆದೇಶದ ಕಾನೂನು ಸಮ್ಮತತೆ ಮತ್ತು ಔಚಿತ್ಯತೆಯನ್ನು ತಾನು ಅಥವಾ ಅದು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು ಅಥವಾ ಪರೀಕ್ಷಿಸಬಹುದು ಮತ್ತು ಆ ಸಂಬಂಧದಲ್ಲಿ ತಾನು ಅಥವಾ ಅದು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸಬಹುದು.

(7) ಈ ಪ್ರಕರಣದ ಅಡಿಯಲ್ಲಿ ಗೃಹ ರಕ್ಷಕ ದಳದ ಒಬ್ಬ ಸದಸ್ಯನಿಗೆ ವಿಧಿಸಿದ ಯಾವುದೇ ದಂಡವು 10ನೇ ಪ್ರಕರಣದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಅಂಥ ಸದಸ್ಯನು ಗುರಿಯಾಗುವ ಯಾವುದೇ ಶಿಕ್ಷೆಗೆ ಹೆಚ್ಚಿಗೆಯಾಗಿ ಇರತಕ್ಕದ್ದು.

**10. ದಂಡನೆ.–** (1) ಗೃಹ ರಕ್ಷಕ ದಳದ ಯಾರೇ ಸದಸ್ಯನನ್ನು 5ನೇ ಪ್ರಕರಣದ ಅಡಿಯಲ್ಲಿ ಕರೆದಾಗ, ಯುಕ್ತ ಕಾರಣವಿಲ್ಲದೆ ಅಂಥ ಆದೇಶವನ್ನು ಪಾಲಿಸಲು ಅಥವಾ ಅವನು ಗೃಹ ರಕ್ಷಕ ದಳದ ಸದಸ್ಯನಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಥವಾ ಅವನ ಕರ್ತವ್ಯಗಳ ನಿರ್ವಹಣೆಗಾಗಿ ಅವನಿಗೆ ನೀಡಲಾದ ಯಾವುದೇ ಕಾನೂನು ಸಮ್ಮತ ಆದೇಶ ಅಥವಾ ನಿರ್ದೇಶನವನ್ನು ಪಾಲಿಸಲು ನಿರ್ಲಕ್ಷಿಸಿದರೆ ಅಥವಾ ನಿರಾಕರಿಸಿದರೆ, ಅವನನ್ನು ಅಪರಾಧ ನಿರ್ಣಯದ ತರುವಾಯ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಎರಡು ನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಗೃಹ ರಕ್ಷಕ ದಳದ ಯಾರೇ ಸದಸ್ಯನು 8ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ ತನ್ನ ನೇಮಕಾತಿಯ ಪ್ರಮಾಣಪತ್ರ ಅಥವಾ ಅಧಿಕಾರ ಪ್ರಮಾಣಪತ್ರ ಅಥವಾ ಯಾವುದೇ ಇತರೆ ವಸ್ತುಗಳನ್ನು ಹಿಂದಕ್ಕೆ ಒಪ್ಪಿಸಲು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದರೆ ಅಥವಾ ನಿರಾಕರಿಸಿದರೆ, ಅವನನ್ನು ಅಂಥ ಅಪರಾಧ ನಿರ್ಣಯದ ತರುವಾಯ ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಕಮಾಂಡೆಂಟರ ಪೂರ್ವಾನುಮತಿಯಿಲ್ಲದೆ (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

(4) ಈ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಒಂದು ಅಪರಾಧವನ್ನು ಮಾಡಿರುವ ಯಾರೇ ವ್ಯಕ್ತಿಯನ್ನು ಪೊಲೀಸ್ ಅಧಿಕಾರಿಯು ವಾರೆಂಟ್ ಇಲ್ಲದೆ ದಸ್ತಗಿರಿ ಮಾಡಬಹುದು.

**11. ಕಮಾಂಡೆಂಟ್‌ನ ಅಥವಾ ಕಮಾಂಡೆಂಟ್ ಜನರಲ್‌ನ ವಿರುದ್ಧ ಶಿಸ್ತು ಕ್ರಮ.–** ರಾಜ್ಯ ಸರ್ಕಾರವು, ಯಾವುದೇ ಸಮಯದಲ್ಲಿ ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, ಕಮಾಂಡೆಂಟ್ ಅಥವಾ ಕಮಾಂಡೆಂಟ್ ಜನರಲ್‌ನು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಅಜಾಗರೂಕತೆ ಅಥವಾ ನಿರ್ಲಕ್ಷ್ಯತೆ ತೋರಿದ್ದಾನೆಂದು ಅಥವಾ ಅನ್ಯಥಾ ಆ ಕರ್ತವ್ಯ ನಿರ್ವಹಣೆಗೆ ದಕ್ಷನಲ್ಲವೆಂದು ಪರಿಗಣಿಸಿದರೆ ಅವನನ್ನು ವಜಾ ಮಾಡಬಹುದು, ತೆಗೆದುಹಾಕಬಹುದು, ಅಮಾನತುಗೊಳಿಸಬಹುದು ಅಥವಾ ಕೆಳ ಹುದ್ದೆಗೆ ಅಥವಾ ದರ್ಜೆಗೆ ಇಳಿಸಬಹುದು ಮತ್ತು ಯಾರೇ ಅಂಥ ಅಧಿಕಾರಿಯ ನಿರ್ಲಕ್ಷ ಅಥವಾ ಆದೇಶಗಳ ಉಲ್ಲಂಘನೆಯಿಂದಾಗಿ ರಾಜ್ಯ ಸರ್ಕಾರಕ್ಕೆ ಉಂಟಾದ ಯಾವುದೇ ಆರ್ಥಿಕ ನಷ್ಟದ ಪೂರ್ಣ ಮೊತ್ತ ಅಥವಾ ಅದರ ಯಾವುದೇ ಭಾಗವನ್ನು ಅವನ ವೇತನ ಅಥವಾ ಭತ್ಯೆಗಳಿಂದ ವಸೂಲಿ ಮಾಡಲು ಆದೇಶಿಸಬಹುದು.

**12. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ.–** (1) ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ವಿಷಯಗಳ ಬಗ್ಗೆ ಉಪಬಂಧಿಸಬಹುದು ಅಥವಾ ವಿನಿಯಮಿಸಬಹುದು ಎಂದರೆ:–

(ಎ) 5ನೇ ಪ್ರಕರಣದ ಅಡಿಯಲ್ಲಿ ಕಮಾಂಡೆಂಟ್‌ನಿಗೆ ಮತ್ತು ಕಮಾಂಡೆಂಟ್ ಜನರಲ್‌ನಿಗೆ ಪ್ರದತ್ತವಾದ ಅಧಿಕಾರಗಳನ್ನು ಗೃಹ ರಕ್ಷಕ ದಳದ ಯಾರೇ ಅಧಿಕಾರಿಯು ಚಲಾಯಿಸುವ ಬಗ್ಗೆ;

[1][(ಎಎ) 3ನೇ ಪ್ರಕರಣದ (2ಬಿ) ಉಪಪ್ರಕರಣದ ಅಡಿಯಲ್ಲಿ ಕಮಾಂಡೆಂಟರ ಆಯ್ಕೆಗೆ ಇರುವ ಅರ್ಹತೆ ಮತ್ತು ಕಾರ್ಯವಿಧಾನ ಮತ್ತು ಅವರ ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳ ಬಗ್ಗೆ;][1]

1. 2003ರ ಅಧಿನಿಯಮ 19ರ ಮೂಲಕ 22.4.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಬಿ) ಪೊಲೀಸ್ ದಳಕ್ಕೆ ನೆರವು ನೀಡುವುದಕ್ಕಾಗಿ ಕೆಲಸ ಮಾಡುವಾಗ ಗೃಹ ರಕ್ಷಕ ದಳದ ಸದಸ್ಯರ ಮೇಲೆ ಪೊಲೀಸ್ ದಳದ ಅಧಿಕಾರಿಗಳು ನಿಯಂತ್ರಣವನ್ನು ಹೊಂದಿರುವ ಬಗ್ಗೆ;

(ಸಿ) ಗೃಹ ರಕ್ಷಕ ದಳದ ಸದಸ್ಯರ ಸಂಘಟನೆ, ನೇಮಕಾತಿ, ಸೇವಾಷರತ್ತುಗಳು, ಪ್ರಕಾರ್ಯಗಳು, ಶಿಸ್ತು, ಆಯುಧಗಳು, ವಿಶೇಷ ಉಡುಗೆ ತೊಡಿಗೆಗಳು ಮತ್ತು ಬಟ್ಟೆಗಳ ಬಗ್ಗೆ ಮತ್ತು ಅವರನ್ನು ಸೇವೆಗಾಗಿ ಕರೆಯಬಹುದಾದಂಥ ವಿಧಾನದ ಬಗ್ಗೆ;

(ಡಿ) 6ನೇ ಪ್ರಕರಣದ ಅಡಿಯಲ್ಲಿ ಚಲಾಯಿಸಬಹುದಾದ ಯಾವುವೇ ಅಧಿಕಾರಗಳನ್ನು ಗೃಹ ರಕ್ಷಕ ದಳದ ಸದಸ್ಯರು ಚಲಾಯಿಸುವ ಬಗ್ಗೆ;

(ಇ) ಕಮಾಂಡೆಂಟ್‌ನ ಅಥವಾ ಕಮಾಂಡೆಂಟ್ ಜನರಲ್‌ನ ವಿರುದ್ಧ ಶಿಸ್ತು ಕ್ರಮವನ್ನು ತೆಗೆದುಕೊಳ್ಳುವಾಗ ಅನುಸರಿಸಬೇಕಾದ ಕಾರ್ಯ ವಿಧಾನದ ಬಗ್ಗೆ;

(ಎಫ್) ಈ ಅಧಿನಿಯಮದ ಉಪಬಂಧಗಳನ್ನು ಸಾಮಾನ್ಯವಾಗಿ ಕಾರ್ಯಗತ ಗೊಳಿಸುವ ಬಗ್ಗೆ.

(3) ಈ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಟ್ಟ ಅಧಿವೇಶನ ಅಥವಾ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಎರಡೂ ಸದನಗಳು ಆ ಯಾವುದೇ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಒಪ್ಪಿದರೆ ಅಥವಾ ಆ ಎರಡೂ ಸದನಗಳು ಆ ನಿಯಮವನ್ನು ಮಾಡಕೂಡದೆಂದು ಒಪ್ಪಿದರೆ, ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು, ಈ ನಿಯಮದ ಅಡಿಯಲ್ಲಿ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**13. ಗೃಹ ರಕ್ಷಕ ದಳದ ಸದಸ್ಯರು ಲೋಕ ನೌಕರರಾಗಿರುವುದು.–** ಈ ಅಧಿನಿಯಮದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗೃಹ ರಕ್ಷಕ ದಳದ ಸದಸ್ಯರುಗಳನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರು ಎಂದು ಭಾವಿಸತಕ್ಕದ್ದು.

**14. ಗೃಹ ರಕ್ಷಕ ದಳದ ಸದಸ್ಯರನ್ನು ಸ್ಥಳೀಯ ಪ್ರಾಧಿಕಾರಗಳ ಸದಸ್ಯರಾಗುವುದರಿಂದ ಅನರ್ಹಗೊಳಿಸದಿರುವುದು.–** ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ, ಗೃಹ ರಕ್ಷಕ ದಳದ ಒಬ್ಬ ಸದಸ್ಯನನ್ನು, ಅವನು ಗೃಹ ರಕ್ಷಕ ದಳದ ಒಬ್ಬ ಸದಸ್ಯನಾಗಿದ್ದಾನೆಂಬ ಅಥವಾ ಅವನು ಗೃಹ ರಕ್ಷಕ ದಳದ ಒಬ್ಬ ಸದಸ್ಯನಾಗಿರುವುದರಿಂದ ಸರ್ಕಾರದಲ್ಲಿ ಲಾಭದಾಯಕ ಹುದ್ದೆಯನ್ನು ಹೊಂದಿದ್ದಾನೆಂಬ ಕಾರಣ ಮಾತ್ರದಿಂದಲೇ ಯಾವುದೇ ಸ್ಥಳೀಯ ಪ್ರಾಧಿಕಾರದ ಸದಸ್ಯನನ್ನಾಗಿ ಆಯ್ಕೆ ಮಾಡಲು ಅಥವಾ ಸದಸ್ಯನಾಗಿರಲು ಅನರ್ಹಗೊಳಿಸತಕ್ಕದ್ದಲ್ಲ.

**15. 1957ರ [1][ಕರ್ನಾಟಕ ಅಧಿನಿಯಮ][1] 4ರ ತಿದ್ದುಪಡಿ.–** 1956ರ [1][ಕರ್ನಾಟಕ] ವಿಧಾನ ಮಂಡಲ (ಅನರ್ಹತಾ ನಿವಾರಣೆ) ಅಧಿನಿಯಮದ, 3ನೇ ಪ್ರಕರಣದಲ್ಲಿ (ಬಿ) ಖಂಡದ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಬಿಬಿ) 1962ರ [1][ಕರ್ನಾಟಕ][1] ಗೃಹ ರಕ್ಷಕ ದಳ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಗೃಹ ರಕ್ಷಕ ದಳದ ಸದಸ್ಯನ ಹುದ್ದೆ";

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**16. ಕೆಲವು ಅಧಿನಿಯಮಗಳ ನಿರಸನ ಮತ್ತು ಉಳಿಸುವಿಕೆಗಳು.–** ಮುಂಬಯಿ ಗೃಹ ರಕ್ಷಕ ದಳ ಅಧಿನಿಯಮ, 1947 (1947 ರ ಮುಂಬಯಿ ಅಧಿನಿಯಮ III), ಮೈಸೂರು ಗೃಹ ರಕ್ಷಕ ದಳ ಅಧಿನಿಯಮ, 1942 (1941ರ ಮೈಸೂರು ಅಧಿನಿಯಮ XIV), ಮದರಾಸು ಗೃಹ ರಕ್ಷಕ ದಳ ಅಧಿನಿಯಮ, 1948 (1948ರ ಮದರಾಸು ಅಧಿನಿಯಮ 1) ಮತ್ತು ಕೊಡಗು ಗೃಹ ರಕ್ಷಕ ದಳ ಆಧಿನಿಯಮ, 1950 (1950ರ ಕೊಡಗು ಅಧಿನಿಯಮ 1) – ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು [1][ಕರ್ನಾಟಕ][1] ಸಾಮಾನ್ಯ ಖಂಡಗಳ ಅಧಿನಿಯಮ, 1899 (1899ರ [1][ಕರ್ನಾಟಕ][1] ಅಧಿನಿಯಮ III)ರ 6ನೇ ಪ್ರಕರಣವು ಅಂಥ ನಿರಸನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮಿತಿಯ 8 ಮತ್ತು 24ನೇ ಪ್ರಕರಣಗಳು, ಸದರಿ ಅಧಿನಿಯಮಗಳನ್ನು ನಿರಸನಗೊಳಿಸಿದ್ದು ಮತ್ತು ಈ ಆಧಿನಿಯಮದ ಮೂಲಕ ಪುನರ್ ಅಧಿನಿಯಮಿತಗೊಂಡಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು:

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

ಮತ್ತೂ ಪರಂತು, ಈ ಅಧಿನಿಯಮವು ಜಾರಿಗೆ ಬರುವ ನಿಕಟಪೂರ್ವದಲ್ಲಿ ನಿರಸಿತವಾದ ಯಾವುದೇ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಗೃಹ ರಕ್ಷಕ ದಳದ ಸದಸ್ಯರನ್ನು ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಗೃಹ ರಕ್ಷಕ ದಳದ ಸದಸ್ಯರೆಂದು ಭಾವಿಸತಕ್ಕದ್ದು.

**17. 1962ರ [1][ಕರ್ನಾಟಕ][1] ಅಧ್ಯಾದೇಶ ಸಂಖ್ಯೆ 4ರ ನಿರಸನ.–** (1) 1962ರ [1][ಕರ್ನಾಟಕ][1] ಗೃಹ ರಕ್ಷಕ ದಳದ ಅಧ್ಯಾದೇಶವನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

ಹಾಗೆ ನಿರಸನಗೊಂಡಿದ್ದಾಗ್ಯೂ, ಸದರಿ ಅಧ್ಯಾದೇಶದ ಅಡಿಯಲ್ಲಿ ಮಾಡಲಾದ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು (ಹೊರಡಿಸಲಾದ ಯಾವುದೇ ಅಧಿಸೂಚನೆ ಅಥವಾ ಆದೇಶ, ನಿಯಮ ಅಥವಾ ಮಾಡಲಾದ ನೇಮಕಾತಿಯೂ ಸೇರಿದಂತೆ) ಈ ನಿಯಮದಿಂದ ಅಥವಾ ಅದರ ಅಡಿಯಲ್ಲಿ ಪ್ರದತ್ತವಾದ ಆಧಿಕಾರಗಳನ್ನು ಚಲಾಯಿಸಿ ಅಥವಾ ಅಂಥ ಕ್ರಮವನ್ನು ಕೈಗೊಂಡ ದಿನಾಂಕದಂದು ಈ ಅಧಿನಿಯಮವು ಜಾರಿಯಲ್ಲಿತ್ತು ಎಂಬಂತೆ ಅದನ್ನು ಮಾಡಲಾದ ಅಥವಾ ಕ್ರಮ ಕೈಗೊಳ್ಳಲಾದ ದಿನದಿಂದ ಈ ಅಧಿನಿಯಮವು ಜಾರಿಯಲ್ಲಿದ್ದರೆ ಹೇಗೋ ಹಾಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

The above translation of the Karnataka Home Guards Act 1962 (Karnataka Act 35 of 1962) shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963)

GOVERNOR OF KARNATAKA

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಜಿ.ಕೆ. ಬೋರೇಗೌಡ**

ಪಿ.ಆರ್. 190 ಸರ್ಕಾರದ ಕಾರ್ಯದರ್ಶಿ,

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

**ಲೋಕೋಪಯೋಗಿ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಲೋಇ.56.ಅಕೋ–3/2007, ಬೆಂಗಳೂರು, ದಿನಾಂಕ: 21ನೇ ಫೆಬ್ರವರಿ 2007**

ಕೃಷ್ಣಾ ಜಲವಿವಾದಕ್ಕೆ ಸಂಬಂಧಿಸಿದಂತೆ, ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ಕೃಷ್ಣಾ ಕಣಿವೆಯ ಪ್ರದೇಶಗಳ Socio-economic aspects ಕುರಿತು ಅಧ್ಯಯನ ನಡೆಸಿ ವರದಿ ನೀಡುವ ಕಾರ್ಯವನ್ನು ಐ.ಎಸ್.ಇ.ಸಿ. (ISEC) ಸಂಸ್ಥೆಗೆ ವಹಿಸಲು ಜಲಸಂಪನ್ಮೂಲ ಇಲಾಖೆಯು ಉದ್ದೇಶಿಸಿದ್ದು, ಸದರಿ ಸಂಸ್ಥೆಯಿಂದ ಈ ಸೇವೆಯನ್ನು ರು. 39.51 ಲಕ್ಷಗಳಲ್ಲಿ (ಮೂವತ್ತೊಂಬತ್ತು ಲಕ್ಷದ ಐವತ್ತೊಂದು ಸಾವಿರ ರೂಪಾಯಿಗಳು ಮಾತ್ರ) ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999ರ ಕಲಂ 4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಜಲಸಂಪನ್ಮೂಲ ಇಲಾಖೆಗೆ ಸರ್ಕಾರವು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಅಶೋಕ ಎಸ್. ಜೀವರಗಿ**

ಪಿ.ಆರ್. 192 ಸರ್ಕಾರದ ಅಧೀನ ಕಾರ್ಯದರ್ಶಿ,

ಲೋ.ಇ. (ಆರ್ಥಿಕ ಕೋಶ).

## ಕಂದಾಯ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ:ಕಂಇ 18 ಎಲ್ಆರ್ಎಂ 2006 ಬೆಂಗಳೂರು, ದಿನಾಂಕ 20ನೇ ಜನವರಿ 2007.**

ಹೇಮರೆಡ್ಡಿ ಮಲ್ಲಮ್ಮ ವಿದ್ಯಾ ಸಂಸ್ಥೆ (ರಿ) ಕುಣಿಕೇರಿ ಇವರು ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕು, ಕುಣಿಕೇರಿ ಹಾಗು ಕರ್ಕಿಹಳ್ಳಿ ಗ್ರಾಮದ ರಿ.ಸ.ನಂ. 247ರಲ್ಲಿ 13 ಎಕರೆ 33 ಗುಂಟೆ, ರಿ.ಸ.ನಂ. 263/2ರಲ್ಲಿ 08 ಎಕರೆ, ರಿ.ಸ.ನಂ.272/ಏರಲ್ಲಿ 05 ಎಕರೆ, ರಿ.ಸ.ನಂ.267/ಎ/2ರಲ್ಲಿ 02 ಎಕರೆ 30 ಗುಂಟೆ, ರಿ.ಸ.ನಂ.267/ಬಿ/2ರಲ್ಲಿ 02 ಎಕರೆ 30 ಗುಂಟೆ, ರಿ.ಸ.ನಂ.272/ಬಿ ರಲ್ಲಿ 05 ಎಕರೆ, ರಿ.ಸ.ನಂ.271/ಬಿ ರಲ್ಲಿ 04 ಎಕರೆ 04 ಗುಂಟೆ, ರಿ.ಸ.ನಂ. 267/ಬಿ/1 ರಲ್ಲಿ 02 ಎಕರೆ 30 ಗುಂಟೆ, ರಿ.ಸ.ನಂ.267/ಎ/1 ರಲ್ಲಿ 02 ಎಕರೆ 30 ಗುಂಟೆ, ರಿ.ಸ.ನಂ. 267/ಎಫ್ ರಲ್ಲಿ 02 ಎಕರೆ, ರಿ.ಸ.ನಂ.267/ಸಿ ರಲ್ಲಿ 02 ಎಕರೆ, ರಿ.ಸ.ನಂ.276/ಎ ರಲ್ಲಿ 04 ಎಕರೆ 07 ಗುಂಟೆ, ರಿ.ಸ.ನಂ.267/ಡಿ ರಲ್ಲಿ 02 ಎಕರೆ, ರಿ.ಸ.ನಂ.267/ಇ ರಲ್ಲಿ 02 ಎಕರೆ ಹಾಗೂ ಕರ್ಕೀಹಳ್ಳಿ ಗ್ರಾಮದ ರಿ.ಸ.ನಂ. 75/ಅ ರಲ್ಲಿ 04 ಎಕರೆ 23 ಗುಂಟೆ, ರಿ.ಸ.ನಂ. 75/ಅ ರಲ್ಲಿ 04 ಎಕರೆ 24 ಗುಂಟೆ ಹಾಗೂ ರಿ.ಸ.ನಂ.78/ಇ ರಲ್ಲಿ 03 ಎಕರೆ 20 ಗುಂಟೆ ಹೀಗೆ ಒಟ್ಟು 71 ಎಕರೆ 31 ಗುಂಟೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕೆ ಖರೀದಿಸುವ ಬಗ್ಗೆ ಮಾಡಿದ ಬೇಡಿಕೆ ಹಾಗೂ ನಮೂನೆ 15ಎ ಮತ್ತು 15ಎಎ ಗಳಲ್ಲಿ ನೀಡಿದ ಮಾಹಿತಿ ಅನುಸರಿಸಿ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ ಇವರು ತಮ್ಮ ಪತ್ರ ಸಂಖ್ಯೆ ಕಂದಾಯ/ಭೂಸು/62/300/02-03 ದಿನಾಂಕ 20.10.2005ರ ಪತ್ರದಲ್ಲಿ ಮೇಲ್ಕಂಡ ಗ್ರಾಮದ ಸರ್ವೆನಂ.ಗಳಲ್ಲಿ ಒಟ್ಟು 71 ಎಕರೆ 31 ಗುಂಟೆ ಜಮೀನನ್ನು ಖರೀದಿಸಲು ಸದರಿ ಸಂಸ್ಥೆಗೆ ಕರ್ನಾಟಕ ಭುಸುಧಾರಣೆ ಕಾಯ್ದೆ 1961ರ ಕಲಂ 109(1ಎ)ರಡಿ ಅನುಮೋದನೆ/ವಿನಾಯಿತಿ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾಪಿತ ಜಮೀನು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (PTCL ಕಾಯ್ದೆ 1978) ಕರ್ನಾಟಕ ಭೂಮಂಜೂರಾತಿ ನಿಯಮಾವಳಿಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆ ಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟ ಉದ್ದೇಶಕ್ಕಾಗಿ ಎಷ್ಟೇ ವಿಸ್ತೀರ್ಣದ ಭೂಮಿಯನ್ನು ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯಿತಿ ನೀಡಲು ಸದರಿ ಕಾಯ್ದೆಯ ಕಲಂ 109 (1ಎ)ರಲ್ಲಿ ಅವಕಾಶ ಕಲ್ಪಿಸಿದೆ.

ಈ ಪ್ರಸ್ತಾವನೆ ಕರ್ನಾಟಕ ಭೂಸುಧಾರಣೆ (ತಿದ್ದುಪಡಿ) ಕಾಯ್ದೆ 1995ರ ಕಲಂ 109(1ಎ) ಮತ್ತು ಕರ್ನಾಟಕ ಭೂಸುಧಾರಣೆ (ತಿದ್ದುಪಡಿ) ನಿಯಮಗಳು 1996ರ ನಿಯಮ 38ಬಿ ಮತ್ತು 38ಸಿ ರಲ್ಲಿನ ಷರತ್ತುಗಳನ್ನು ಪೂರೈಸಿದ್ದು ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯಿತಿ ನೀಡಿ ಹೇಮರೆಡ್ಡಿ ಮಲ್ಲಮ್ಮ ವಿದ್ಯಾ ಸಂಸ್ಥೆ (ರಿ) ಕೊಪ್ಪಳ ಜಿಲ್ಲೆ ಇವರು ಕೊಪ್ಪಳ ತಾಲ್ಲೂಕು ಕುಣೀಕೇರಿ ಗ್ರಾಮದ ರಿ.ಸ.ನಂ. ರಿ.ಸ.ನಂ. 247ರಲ್ಲಿ 13 ಎಕರೆ 33 ಗುಂಟೆ, ರಿ.ಸ.ನಂ. 263/2ರಲ್ಲಿ 08 ಎಕರೆ, ರಿ.ಸ.ನಂ.272/ಏರಲ್ಲಿ 05 ಎಕರೆ, ರಿ.ಸ.ನಂ.267/ಎ/2ರಲ್ಲಿ 02 ಎಕರೆ 30 ಗುಂಟೆ, ರಿ.ಸ.ನಂ.267/ಬಿ/2ರಲ್ಲಿ 02 ಎಕರೆ 30 ಗುಂಟೆ, ರಿ.ಸ.ನಂ.272/ಬಿ ರಲ್ಲಿ 05 ಎಕರೆ, ರಿ.ಸ.ನಂ.271/ಬಿ ರಲ್ಲಿ 04 ಎಕರೆ 04 ಗುಂಟೆ, ರಿ.ಸ.ನಂ. 267/ಬಿ/1 ರಲ್ಲಿ 02 ಎಕರೆ 30 ಗುಂಟೆ, ರಿ.ಸ.ನಂ.267/ಎ/1 ರಲ್ಲಿ 02 ಎಕರೆ 30 ಗುಂಟೆ, ರಿ.ಸ.ನಂ. 267/ಎಫ್ ರಲ್ಲಿ 02 ಎಕರೆ, ರಿ.ಸ.ನಂ.267/ಸಿ ರಲ್ಲಿ 02 ಎಕರೆ, ರಿ.ಸ.ನಂ.276/ಎ ರಲ್ಲಿ 04 ಎಕರೆ 07 ಗುಂಟೆ, ರಿ.ಸ.ನಂ.267/ಡಿ ರಲ್ಲಿ 02 ಎಕರೆ, ರಿ.ಸ.ನಂ.267/ಇ ರಲ್ಲಿ 02 ಎಕರೆ ಹಾಗೂ ಕರ್ಕೀಹಳ್ಳಿ ಗ್ರಾಮದ ರಿ.ಸ.ನಂ. 75/ಅ ರಲ್ಲಿ 04 ಎಕರೆ 23 ಗುಂಟೆ, ರಿ.ಸ.ನಂ. 75/ಆ ರಲ್ಲಿ 04 ಎಕರೆ 24 ಗುಂಟೆ ಹಾಗೂ ರಿ.ಸ.ನಂ.78/ಇ ರಲ್ಲಿ 03 ಎಕರೆ 20 ಗುಂಟೆ ಹೀಗೆ ಒಟ್ಟು 71 ಎಕರೆ 31 ಗುಂಟೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕೆ ಹಾಗೂ ಕೂಡಲ ಸಂಗಮನಾಥ ವಸತಿ ಶಾಲೆ ಉದ್ದೇಶಕ್ಕಾಗಿ ಕುಣೀಕೇರಿ ಹಾಗೂ ಕರ್ಕಿಹಳ್ಳಿ ಗ್ರಾಮದ ಕೃಷಿ ಜಮೀನನ್ನು ದಾನವಾಗಿ ಪಡೆಯಲು ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 109(1ಎ) ಅಡಿ ಅನುಮೋದನೆ ನೀಡಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟಂತೆ ಸರ್ಕಾರದ ಅನುಮತಿ ನೀಡಲಾಗಿದೆ.

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು 2 ವರ್ಷದೊಳಗಾಗಿ ಉಪಯೋಗಿಸತಕ್ಕದ್ದು ಮತ್ತು ಆ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ 1956ರ ಕಲಂ 3ರಲ್ಲಿ ಹೇಳಿರುವಂತೆ ಶೇ.51 ಪೇಡ್ ಆಫ್ ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಿತ ಅಥವಾ ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ/ ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

3. ಸದರಿ ಜಮೀನು ನಗರಾಭಿವೃದ್ಧಿ ಪ್ರಾಧಿಕಾರ ಸಿ.ಡಿ.ಪಿ/ಓಡಿ.ಪಿ ವ್ಯಾಪ್ತಿಯೊಳಗೆ ಬಂದರೆ ಅದರಂತೆ ಅನುಮತಿ ಪಡೆದು ಉಪಯೋಗಿಸತಕ್ಕದ್ದು
4. ಈ ಅನುಮತಿಯು ಕರ್ನಾಟಕ ಭೂಸುಧಾರಣೆ ಅಧಿನಿಯಮ 1961ರ ಕಲಂ 109ರನ್ವಯ ವಿನಾಯಿತಿ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.
5. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೋತ್ತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಕಲಂ 95ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯತಕ್ಕದ್ದು
6. ಸಂಸ್ಥೆ ನಡೆಸುವ ಚಟುವಟಿಕೆಗಳು ಸ್ಥಳೀಯ ಕಾನೂನು ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.
7. ಪ್ರಸ್ತಾಪಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಜಮೀನಿನ ವಿನ್ಯಾಸಕ್ಕೆ ನಗರ ಯೋಜನೆ ಇಲಾಖೆ/ಅಭಿವೃದ್ಧಿ ಪ್ರಾಧಿಕಾರ/ಸ್ಥಳೀಯ ಪ್ರಾಧಿಕಾರದಿಂದ ಅನುಮೋದನೆ ಪಡೆಯತಕ್ಕದ್ದು.
8. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯಾ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಜಮೀನನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಿಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಬಿ. ಚಿಕ್ಕರಾಜು**

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ(ಭೂಸುಧಾರಣೆ)

ಪಿ.ಆರ್. 117

**ಅಧಿಸೂಚನೆ**

**ಸಂಖ್ಯೆ:ಕಂಇ 94 ಎಲ್‌ಆರ್‌ಎಂ 2005, ಬೆಂಗಳೂರು, ದಿನಾಂಕ 20ನೇ ಜನವರಿ 2007.**

ಶ್ರೀ ಸ್ವಕುಳಸಾಳಿ ಸಮಾಜ (ರಿ) ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ ಇವರು ಮೊಳಕಾಲ್ಮೂರು ತಾಲ್ಲೂಕು, ಮೊಳಕಾಲ್ಮೂರು ಗ್ರಾಮದ ಸ.ನಂ.4/3ಬಿರಲ್ಲಿ 03 ಎಕರೆ 01 ಗುಂಟೆ ಜಮೀನನ್ನು ಧಾರ್ಮಿಕ, ಶೈಕ್ಷಣಿಕ ಉದ್ದೇಶಕ್ಕಾಗಿ ಖರೀದಿಸುವ ಬಗ್ಗೆ ಮಾಡಿದ ಬೇಡಿಕೆ ಹಾಗೂ ನಮೂನೆ 15ಎ ಮತ್ತು 15ಎಎ ಗಳಲ್ಲಿ ನೀಡಿದ ಮಾಹಿತಿ ಅನುಸರಿಸಿ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ಇವರು ತಮ್ಮ ಪತ್ರ ಸಂಖ್ಯೆ ಎಲ್‌ಆರ್‌ಎಂ ಸಿಆರ್ 22/04-05 ದಿನಾಂಕ 12.8.2005 ಮತ್ತು 1.4.2006ರ ಪತ್ರದಲ್ಲಿ ಮೇಲ್ಕಂಡ ಗ್ರಾಮದ ಸರ್ವೆನಂ.ಗಳಲ್ಲಿ ಒಟ್ಟು 03 ಎಕರೆ 01 ಗುಂಟೆ ಜಮೀನನ್ನು ಖರೀದಿಸಲು ಸದರಿ ಸಂಸ್ಥೆಗೆ ಕರ್ನಾಟಕ ಭುಸುಧಾರಣೆ ಕಾಯ್ದೆ 1961ರ ಕಲಂ 109(1ಎ)ರಡಿ ಅನುಮೋದನೆ/ವಿನಾಯಿತಿ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾಪಿತ ಜಮೀನು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (PTCL ಕಾಯ್ದೆ 1978) ಕರ್ನಾಟಕ ಭೂಮಂಜೂರಾತಿ ನಿಯಮಾವಳಿಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆ ಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟ ಉದ್ದೇಶಕ್ಕಾಗಿ ಎಷ್ಟೇ ವಿಸ್ತೀರ್ಣದ ಭೂಮಿಯನ್ನು ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯಿತಿ ನೀಡಲು ಸದರಿ ಕಾಯ್ದೆಯ ಕಲಂ 109 (1ಎ)ರಲ್ಲಿ ಅವಕಾಶ ಕಲ್ಪಿಸಿದೆ.

ಈ ಪ್ರಸ್ತಾವನೆ ಕರ್ನಾಟಕ ಭೂಸುಧಾರಣೆ (ತಿದ್ದುಪಡಿ) ಕಾಯ್ದೆ 1995ರ ಕಲಂ 109(1ಎ) ಮತ್ತು ಕರ್ನಾಟಕ ಭೂಸುಧಾರಣೆ (ತಿದ್ದುಪಡಿ) ನಿಯಮಗಳು 1996ರ ನಿಯಮ 38ಬಿ ಮತ್ತು 38ಸಿ ರಲ್ಲಿನ ಷರತ್ತುಗಳನ್ನು ಪೂರೈಸಿದ್ದು ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯಿತಿ ನೀಡಿ ಶ್ರೀ ಸ್ವಕುಳಸಾಳಿ ಸಮಾಜ (ರಿ) ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ ಇವರು ಮೊಳಕಾಲ್ಮೂರು ತಾಲ್ಲೂಕು, ಮೊಳಕಾಲ್ಮೂರು ಗ್ರಾಮದ ಸ.ನಂ.4/3ಬಿರಲ್ಲಿ 03 ಎಕರೆ 01 ಗುಂಟೆ ಜಮೀನನ್ನು ಧಾರ್ಮಿಕ, ಶೈಕ್ಷಣಿಕ ಉದ್ದೇಶಕ್ಕಾಗಿ ಖರೀದಿಸುವ ಬಗ್ಗೆ ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 109(1ಎ) ಅಡಿ ಅನುಮೋದನೆ ನೀಡಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟಂತೆ ಸರ್ಕಾರದ ಅನುಮತಿ ನೀಡಲಾಗಿದೆ.

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು 2 ವರ್ಷದೊಳಗಾಗಿ ಉಪಯೋಗಿಸತಕ್ಕದ್ದು ಮತ್ತು ಆ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ 1956ರ ಕಲಂ 3ರಲ್ಲಿ ಹೇಳಿರುವಂತೆ ಶೇ.51 ಪೇಡ್ ಆಫ್ ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಿತ ಅಥವಾ

ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ/ ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

3. ಸದರಿ ಜಮೀನು ನಗರಾಭಿವೃದ್ಧಿ ಪ್ರಾಧಿಕಾರ ಸಿ.ಡಿ.ಪಿ/ಓಡಿ.ಪಿ ವ್ಯಾಪ್ತಿಯೊಳಗೆ ಬಂದರೆ ಅದರಂತೆ ಅನುಮತಿ ಪಡೆದು ಉಪಯೋಗಿಸತಕ್ಕದ್ದು

4. ಈ ಅನುಮತಿಯು ಕರ್ನಾಟಕ ಭೂಸುಧಾರಣೆ ಅಧಿನಿಯಮ 1961ರ ಕಲಂ 109ರನ್ವಯ ವಿನಾಯಿತಿ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.

5. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೋತ್ತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಕಲಂ 95ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯತಕ್ಕದ್ದು

6. ಸಂಸ್ಥೆ ನಡೆಸುವ ಚಟುವಟಿಕೆಗಳು ಸ್ಥಳೀಯ ಕಾನೂನು ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.

7. ಪ್ರಸ್ತಾಪಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಜಮೀನಿನ ವಿನ್ಯಾಸಕ್ಕೆ ನಗರ ಯೋಜನೆ ಇಲಾಖೆ/ಅಭಿವೃದ್ಧಿ ಪ್ರಾಧಿಕಾರ/ಸ್ಥಳೀಯ ಪ್ರಾಧಿಕಾರದಿಂದ ಅನುಮೋದನೆ ಪಡೆಯತಕ್ಕದ್ದು.

8. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯಾ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಜಮೀನನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಿಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಬಿ. ಚಿಕ್ಕರಾಜು**

ಪಿ.ಆರ್. 118

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ(ಭೂಸುಧಾರಣೆ)

**ಅಧಿಸೂಚನೆ**

**ಸಂಖ್ಯೆ:ಕಂಇ 95 ಎಲ್ಆರ್ಎಂ 2005, ಬೆಂಗಳೂರು, ದಿನಾಂಕ 20ನೇ ಜನವರಿ 2007.**

ಶ್ರೀ ನುಲಿಯ ಚಂದ್ರೇಶ್ವರ ಸ್ವಾಮೀಜಿ ಮಹಾಮಠ ಕೊರಚ ಕೊರವ ಜನಾಂಗದ ಅಭಿವೃದ್ಧಿ ಸಮಿತಿ (ಕುಳುವ ಗುರುಪೀಠ) ಸೀಬಾರ, ಚಿತ್ರದುರ್ಗ ಜಿಲ್ಲೆ ಇವರು ಚಿತ್ರದುರ್ಗ ತಾಲ್ಲೂಕು, ಹಿರೇಗುಂಟೂರು ಹೋಬಳಿ ಸೀಬಾರ ಗ್ರಾಮದ ಸ.ನಂ.24ಪಿ1ರಲ್ಲಿ 02 ಎಕರೆ 20 ಗುಂಟೆ ಜಮೀನನ್ನು ಮಠದ ಕಟ್ಟಡ ಶಾಲಾ ನಿರ್ಮಾಣ ಹಾಗು ಧಾರ್ಮಿಕ ಉದ್ದೇಶಕ್ಕಾಗಿ ದಾನ ಪಡೆಯುವ ಬಗ್ಗೆ ಮಾಡಿದ ಬೇಡಿಕೆ ಹಾಗೂ ನಮೂನೆ 15ಎ ಮತ್ತು 15ಎಎ ಗಳಲ್ಲಿ ನೀಡಿದ ಮಾಹಿತಿ ಅನುಸರಿಸಿ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ಇವರು ತಮ್ಮ ಪತ್ರ ಸಂಖ್ಯೆ ಎಲ್ಆರ್ಎಂ ಸಿಆರ್ 4/05-06 ದಿನಾಂಕ 9.12.2005ರ ಪತ್ರದಲ್ಲಿ ಮೇಲ್ಕಂಡ ಗ್ರಾಮದ ಸರ್ವೆನಂ.ಗಳಲ್ಲಿ ಒಟ್ಟು 02 ಎಕರೆ 20 ಗುಂಟೆ ಜಮೀನನ್ನು ದಾನವಾಗಿ ಪಡೆಯಲು ಸದರಿ ಸಂಸ್ಥೆಗೆ ಕರ್ನಾಟಕ ಭುಸುಧಾರಣೆ ಕಾಯ್ದೆ 1961ರ ಕಲಂ 109(1ಎ)ರಡಿ ಅನುಮೋದನೆ/ವಿನಾಯಿತಿ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾಪಿತ ಜಮೀನು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (PTCL ಕಾಯ್ದೆ 1978) ಕರ್ನಾಟಕ ಭೂಮಂಜೂರಾತಿ ನಿಯಮಾವಳಿಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆ ಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಕಾರಣಗಳನ್ನು ದಾಖಲಿಸಿ ನಿರ್ಧಿಷ್ಟ ಉದ್ದೇಶಕ್ಕಾಗಿ ಎಷ್ಟೇ ವಿಸ್ತೀರ್ಣದ ಭೂಮಿಯನ್ನು ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯಿತಿ ನೀಡಲು ಸದರಿ ಕಾಯ್ದೆಯ ಕಲಂ 109 (1ಎ)ರಲ್ಲಿ ಅವಕಾಶ ಕಲ್ಪಿಸಿದೆ.

ಈ ಪ್ರಸ್ತಾವನೆ ಕರ್ನಾಟಕ ಭೂಸುಧಾರಣೆ (ತಿದ್ದುಪಡಿ) ಕಾಯ್ದೆ 1995ರ ಕಲಂ 109(1ಎ) ಮತ್ತು ಕರ್ನಾಟಕ ಭೂಸುಧಾರಣೆ (ತಿದ್ದುಪಡಿ) ನಿಯಮಗಳು 1996ರ ನಿಯಮ 38ಬಿ ಮತ್ತು 38ಸಿ ರಲ್ಲಿನ ಷರತ್ತುಗಳನ್ನು ಪೂರೈಸಿದ್ದು ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯಿತಿ ನೀಡಿ ಶ್ರೀ ನುಲಿಯ ಚಂದ್ರೇಶ್ವರ ಸ್ವಾಮೀಜಿ ಮಹಾಮಠ ಕೊರಚ ಕೊರವ ಜನಾಂಗದ ಅಭಿವೃದ್ಧಿ ಸಮಿತಿ (ಕುಳುವ ಗುರುಪೀಠ), ಚಿತ್ರದುರ್ಗ ಜಿಲ್ಲೆ ಇವರು ಚಿತ್ರದುರ್ಗ ತಾಲ್ಲೂಕು, ಹಿರೇಗುಂಟೂರು ಹೋಬಳಿ ಸೀಬಾರ ಗ್ರಾಮದ ಸ.ನಂ.24ಪಿ1ರಲ್ಲಿ 02 ಎಕರೆ 20 ಗುಂಟೆ ಜಮೀನನ್ನು ಮಠದ ಕಟ್ಟದ, ಶಾಲಾ ನಿರ್ಮಾಣ ಹಾಗು ಧಾರ್ಮಿಕ ಉದ್ದೇಶಕ್ಕಾಗಿ ದಾನ ಪಡೆಯುವ ಬಗ್ಗೆ ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 109(1ಎ) ಅಡಿ ಅನುಮೋದನೆ ನೀಡಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟಂತೆ ಸರ್ಕಾರದ ಅನುಮತಿ ನೀಡಲಾಗಿದೆ.

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು 2 ವರ್ಷದೊಳಗಾಗಿ ಉಪಯೋಗಿಸತಕ್ಕದ್ದು ಮತ್ತು ಆ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ 1956ರ ಕಲಂ 3ರಲ್ಲಿ ಹೇಳಿರುವಂತೆ ಶೇ.51 ಪೇಡ್ ಆಫ್ ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಿತ ಅಥವಾ ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ/ ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
3. ಸದರಿ ಜಮೀನು ನಗರಾಭಿವೃದ್ಧಿ ಪ್ರಾಧಿಕಾರ ಸಿ.ಡಿ.ಪಿ/ಓಡಿ.ಪಿ ವ್ಯಾಪ್ತಿಯೊಳಗೆ ಬಂದರೆ ಅದರಂತೆ ಅನುಮತಿ ಪಡೆದು ಉಪಯೋಗಿಸತಕ್ಕದ್ದು
4. ಈ ಅನುಮತಿಯು ಕರ್ನಾಟಕ ಭೂಸುಧಾರಣೆ ಅಧಿನಿಯಮ 1961ರ ಕಲಂ 109ರನ್ವಯ ವಿನಾಯಿತಿ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.
5. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೋತ್ತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಕಲಂ 95ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯತಕ್ಕದ್ದು
6. ಸಂಸ್ಥೆ ನಡೆಸುವ ಚಟುವಟಿಕೆಗಳು ಸ್ಥಳೀಯ ಕಾನೂನು ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.
7. ಪ್ರಸ್ತಾಪಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಜಮೀನಿನ ವಿನ್ಯಾಸಕ್ಕೆ ನಗರ ಯೋಜನೆ ಇಲಾಖೆ/ಅಭಿವೃದ್ಧಿ ಪ್ರಾಧಿಕಾರ/ಸ್ಥಳೀಯ ಪ್ರಾಧಿಕಾರದಿಂದ ಅನುಮೋದನೆ ಪಡೆಯತಕ್ಕದ್ದು.
8. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯಾ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಜಮೀನನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಿಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಬಿ. ಚಿಕ್ಕರಾಜು**

ಪಿ.ಆರ್. 119

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ(ಭೂಸುಧಾರಣೆ)

**ಅಧಿಸೂಚನೆ**

**ಸಂಖ್ಯೆ:ಕಂಇ 119 ಎಲ್ಆರ್ಎಂ 2006, ಬೆಂಗಳೂರು, ದಿನಾಂಕ 20ನೇ ಜನವರಿ 2007.**

ಗ್ರಾಮೀಣ ಮಹಿಳಾ ಒಕ್ಕೂಟ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ ಇವರಿಗೆ ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ಆವಣಿ ಹೋಬಳಿ, ಎಳಗೊಂಡನ ಹಳ್ಳಿ ಗ್ರಾಮದ ರಿ.ಸ.ನಂ.229/1ರಲ್ಲಿ 01 ಎಕರೆ 14 ಗುಂಟೆ, ರಿ.ಸ.ನಂ.229/2ರಲ್ಲಿ 20 ಗುಂಟೆ, ರಿ.ಸ.ನಂ.229/4ರಲ್ಲಿ 01 ಎಕರೆ 11 ಗುಂಟೆ, ಹಾಗೂ ರಿ.ಸ.ನಂ.230/3ರಲ್ಲಿ 28 ಗುಂಟೆ, ಹೀಗೆ ಒಟ್ಟು 03 ಎಕರೆ 33 ಗುಂಟೆ ಜಮೀನನ್ನು ಗ್ರಾಮೀಣ ಮಹಳಾ ಒಕ್ಕೂಟದ ಅಭಿವೃದ್ಧಿ ಕಾರ್ಯಗಳ ಉದ್ದೇಶಕ್ಕೆ ದಾನವಾಗಿ ಪಡೆಯುವ ಬಗ್ಗೆ ಮಾಡಿದ ಬೇಡಿಕೆ ಹಾಗೂ ನಮೂನೆ 15ಎ ಮತ್ತು 15ಎಎ ಗಳಲ್ಲಿ ನೀಡಿದ ಮಾಹಿತಿ ಅನುಸರಿಸಿ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ ಇವರು ತಮ್ಮ ಪತ್ರ ಸಂಖ್ಯೆ ಎಲ್ಆರ್ಎಫ್(ಕಲಂ 109)/ಸಿಆರ್05/06-07 ದಿನಾಂಕ 1.8.2006ರ ಪತ್ರದಲ್ಲಿ ಮೇಲ್ಕಂಡ ಗ್ರಾಮದ ರಿ.ಸರ್ವೆನಂ.ಗಳಲ್ಲಿ ಒಟ್ಟು 03 ಎಕರೆ 33 ಗುಂಟೆ ಜಮೀನನ್ನು ದಾನವಾಗಿ ಪಡೆಯಲು ಸದರಿ ಸಂಸ್ಥೆಗೆ ಕರ್ನಾಟಕ ಭುಸುಧಾರಣೆ ಕಾಯ್ದೆ 1961ರ ಕಲಂ 109(1ಎ)ರಡಿ ಅನುಮೋದನೆ/ವಿನಾಯಿತಿ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾಪಿತ ಜಮೀನು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (PTCL ಕಾಯ್ದೆ 1978) ಕರ್ನಾಟಕ ಭೂಮಂಜೂರಾತಿ ನಿಯಮಾವಳಿಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟ ಉದ್ದೇಶಕ್ಕಾಗಿ ಎಷ್ಟೇ ವಿಸ್ತೀರ್ಣದ ಭೂಮಿಯನ್ನು ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯಿತಿ ನೀಡಲು ಸದರಿ ಕಾಯ್ದೆಯ ಕಲಂ 109 (1ಎ)ರಲ್ಲಿ ಅವಕಾಶ ಕಲ್ಪಿಸಿದೆ.

ಈ ಪ್ರಸ್ತಾವನೆ ಕರ್ನಾಟಕ ಭೂಸುಧಾರಣೆ (ತಿದ್ದುಪಡಿ) ಕಾಯ್ದೆ 1995ರ ಕಲಂ 109(1ಎ) ಮತ್ತು ಕರ್ನಾಟಕ ಭೂಸುಧಾರಣೆ (ತಿದ್ದುಪಡಿ) ನಿಯಮಗಳು 1996ರ ನಿಯಮ 38ಬಿ ಮತ್ತು 38ಸಿ ರಲ್ಲಿನ ಷರತ್ತುಗಳನ್ನು ಪೂರೈಸಿದ್ದು ಕರ್ನಾಟಕ ಭೂಸುಧಾರಣೆ

ಕಾಯ್ದೆ 1961ರ ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯಿತಿ ನೀಡಿ ಗ್ರಾಮೀಣ ಮಹಿಳಾ ಒಕ್ಕೂಟದ ಅಭಿವೃದ್ಧಿ ಕಾರ್ಯಗಳ ಉದ್ದೇಶಕ್ಕೆ ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು, ಆವಣಿ ಹೋಬಳಿ, ಎಳಗೊಂಡನಹಳ್ಳಿ ಗ್ರಾಮದ ರಿ.ಸ.ನಂ.ರಿ.ಸ.ನಂ.229/1ರಲ್ಲಿ 01 ಎಕರೆ 14 ಗುಂಟೆ, ರಿ.ಸ.ನಂ.229/2ರಲ್ಲಿ 20 ಗುಂಟೆ, ರಿ.ಸ.ನಂ.229/4ರಲ್ಲಿ 01ಎಕರೆ 11 ಗುಂಟೆ, ಹಾಗೂ ರಿ.ಸ.ನಂ.230/3ರಲ್ಲಿ 28 ಗುಂಟೆ, ಹೀಗೆ ಒಟ್ಟು 03 ಎಕರೆ 33 ಗುಂಟೆ ಜಮೀನನ್ನು ಗ್ರಾಮೀಣ ಮಹಿಳಾ ಒಕ್ಕೂಟದ ಅಭಿವೃದ್ಧಿ ಕಾರ್ಯಗಳ ಉದ್ದೇಶಕ್ಕಾಗಿ ದಾನವಾಗಿ ಪಡೆಯಲು ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 109(1ಎ) ಅಡಿ ಅನುಮೋದನೆ ನೀಡಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟಂತೆ ಸರ್ಕಾರದ ಅನುಮತಿ ನೀಡಲಾಗಿದೆ.

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು 2 ವರ್ಷದೊಳಗಾಗಿ ಉಪಯೋಗಿಸತಕ್ಕದ್ದು ಮತ್ತು ಆ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ 1956ರ ಕಲಂ 3ರಲ್ಲಿ ಹೇಳಿರುವಂತೆ ಶೇ.51 ಪೇಡ್ ಆಫ್ ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಿತ ಅಥವಾ ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ/ ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
3. ಸದರಿ ಜಮೀನು ನಗರಾಭಿವೃದ್ಧಿ ಪ್ರಾಧಿಕಾರ ಸಿ.ಡಿ.ಪಿ/ಓಡಿ.ಪಿ ವ್ಯಾಪ್ತಿಯೊಳಗೆ ಬಂದರೆ ಅದರಂತೆ ಅನುಮತಿ ಪಡೆದು ಉಪಯೋಗಿಸತಕ್ಕದ್ದು
4. ಈ ಅನುಮತಿಯು ಕರ್ನಾಟಕ ಭೂಸುಧಾರಣೆ ಅಧಿನಿಯಮ 1961ರ ಕಲಂ 109ರನ್ವಯ ವಿನಾಯಿತಿ ಮಾತ್ರವಾಗಿ ರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.
5. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೋತ್ತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಕಲಂ 95ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯತಕ್ಕದ್ದು
6. ಸಂಸ್ಥೆ ನಡೆಸುವ ಚಟುವಟಿಕೆಗಳು ಸ್ಥಳೀಯ ಕಾನೂನು ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.
7. ಪ್ರಸ್ತಾಪಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಜಮೀನಿನ ವಿನ್ಯಾಸಕ್ಕೆ ನಗರ ಯೋಜನೆ ಇಲಾಖೆ/ಅಭಿವೃದ್ಧಿ ಪ್ರಾಧಿಕಾರ/ಸ್ಥಳೀಯ ಪ್ರಾಧಿಕಾರದಿಂದ ಅನುಮೋದನೆ ಪಡೆಯತಕ್ಕದ್ದು.
8. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯಾ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಜಮೀನನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಿಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಬಿ. ಚಿಕ್ಕರಾಜು**

ಪಿ.ಆರ್. 120

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ(ಭೂಸುಧಾರಣೆ)

**ಅಧಿಸೂಚನೆ**

**ಸಂಖ್ಯೆ:ಕಂಇ 118 ಎಲ್‌ಆರ್‌ಎಂ 2006, ಬೆಂಗಳೂರು, ದಿನಾಂಕ 18.1.2007.**

ಪ್ರೇರಣ ಎಜುಕೇಷನಲ್ ಅಂಡ್ ಸೋಷಿಯಲ್ ಟ್ರಸ್ಟ್, ಬೆಂಗಳೂರು ಇವರು ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು ಗುಡ್ಡದ ಅರಕೆರೆ ಗ್ರಾಮದ ಸ.ನಂ. 17/ಪಿ1ರಲ್ಲಿ 01 ಎಕರೆ 16 ಗುಂಟೆ ಸ.ನಂ.32ರಲ್ಲಿ 03 ಎಕರೆ, ಸ.ನಂ.33ರಲ್ಲಿ 1 ಎಕರೆ 23 ಗುಂಟೆ, ಸ.ನಂ.34ಪಿರಲ್ಲಿ 04 ಎಕರೆ, ಸ.ನಂ.34ಪಿ2ರಲ್ಲಿ 01 ಎಕರೆ 18 ಗುಂಟೆ, ಸ.ನಂ.35/3ರಲ್ಲಿ 04 ಎಕರೆ, ಸ.ನಂ.36/2ರಲ್ಲಿ 04 ಎಕರೆ 14 ಗುಂಟೆ, ಸ.ನಂ.17/ಪಿ2ರಲ್ಲಿ 05 ಎಕರೆ 26 ಗುಂಟೆ, ಸ.ನಂ.35/2ರಲ್ಲಿ 01 ಎಕರೆ 14 ಗುಂಟೆ ಮತ್ತು ಶ್ರೀರಾಮಪುರ ಸ.ನಂ.32/2ರಲ್ಲಿ 35 ಗುಂಟೆ ಹೀಗೆ ಒಟ್ಟು 27 ಎಕರೆ 26 ಗುಂಟೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕೆ ಖರೀದಿಸಲು ಮಾಡಿದ ಬೇಡಿಕೆ ಹಾಗೂ ನಮೂನೆ 15ಎ ಮತ್ತು 15ಎಎಗಳಲ್ಲಿ ನೀಡಿದ ಮಾಹಿತಿ ಅನುಸರಿಸಿ ಜಿಲ್ಲಾಧಿಕಾರಿ ಗಳು, ಶಿವಮೊಗ್ಗ ಇವರು ತಮ್ಮ ಪತ್ರ ಸಂಖ್ಯೆ ಎಲ್‌ಆರ್‌ಎಫ್ ಸಿಆರ್ 77/06-07 ದಿನಾಂಕ 17.12.2006ರ ಪತ್ರದಲ್ಲಿ ಮೇಲ್ಕಂಡ ಗ್ರಾಮದ ಸರ್ವೆನಂ.ಗಳಲ್ಲಿ ಒಟ್ಟು 27 ಎಕರೆ 26 ಗುಂಟೆ ಜಮೀನನ್ನು ಖರೀದಿಸಲು ಸದರಿ ಸಂಸ್ಥೆಗೆ ಕರ್ನಾಟಕ ಭುಸುಧಾರಣೆ ಕಾಯ್ದೆ 1961ರ ಕಲಂ 109(1ಎ) ರಡಿ ಅನುಮೋದನೆ/ವಿನಾಯಿತಿ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾಪಿತ ಜಮೀನು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (PTCL ಕಾಯ್ದೆ 1978) ಕರ್ನಾಟಕ ಭೂಮಂಜೂರಾತಿ ನಿಯಮಾವಳಿಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆ ಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟ ಉದ್ದೇಶಕ್ಕಾಗಿ ಎಷ್ಟೇ ವಿಸ್ತೀರ್ಣದ ಭೂಮಿಯನ್ನು ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯಿತಿ ನೀಡಲು ಸದರಿ ಕಾಯ್ದೆಯ ಕಲಂ 109 (1ಎ)ರಲ್ಲಿ ಅವಕಾಶ ಕಲ್ಪಿಸಿದೆ.

ಈ ಪ್ರಸ್ತಾವನೆ ಕರ್ನಾಟಕ ಭೂಸುಧಾರಣೆ (ತಿದ್ದುಪಡಿ) ಕಾಯ್ದೆ 1995ರ ಕಲಂ 109(1ಎ) ಮತ್ತು ಕರ್ನಾಟಕ ಭೂಸುಧಾರಣೆ (ತಿದ್ದುಪಡಿ) ನಿಯಮಗಳು 1996ರ ನಿಯಮ 38ಬಿ ಮತ್ತು 38ಸಿ ರಲ್ಲಿನ ಷರತ್ತುಗಳನ್ನು ಪೂರೈಸಿದ್ದು ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯಿತಿ ನೀಡಿ ಪ್ರೇರಣ ಎಜುಕೇಷನಲ್ ಅಂಡ್ ಸೋಷಿಯಲ್ ಟ್ರಸ್ಟ್, ಬೆಂಗಳೂರು ಇವರು ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು ಗುಡ್ಡದ ಅರಕೆರೆ ಗ್ರಾಮದ ಸ.ನಂ. 17/ಪಿ1ರಲ್ಲಿ 01 ಎಕರೆ 16 ಗುಂಟೆ, ಸ.ನಂ. 32ರಲ್ಲಿ 03 ಎಕರೆ, ಸ.ನಂ. 33ರಲ್ಲಿ 1 ಎಕರೆ 23 ಗುಂಟೆ, ಸ.ನಂ. 34ಪಿರಲ್ಲಿ 04 ಎಕರೆ, ಸ.ನಂ. 34ಪಿ2ರಲ್ಲಿ 01 ಎಕರೆ 18 ಗುಂಟೆ, ಸ.ನಂ. 35/3ರಲ್ಲಿ 04 ಎಕರೆ, ಸ.ನಂ. 36/2ರಲ್ಲಿ 04 ಎಕರೆ 14 ಗುಂಟೆ, ಸ.ನಂ. 17/ಪಿ2ರಲ್ಲಿ 05 ಎಕರೆ 26 ಗುಂಟೆ, ಸ.ನಂ. 35/2ರಲ್ಲಿ 01 ಎಕರೆ 14 ಗುಂಟೆ ಮತ್ತು ಶ್ರೀರಾಮಪುರ ಸ.ನಂ.32/2ರಲ್ಲಿ 35 ಗುಂಟೆ ಹೀಗೆ ಒಟ್ಟು 27 ಎಕರೆ 26 ಗುಂಟೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕೆ ಖರೀದಿಸಲು ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 109(1ಎ) ಅಡಿ ಅನುಮೋದನೆ ನೀಡಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟಂತೆ ಸರ್ಕಾರದ ಅನುಮತಿ ನೀಡಲಾಗಿದೆ.

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು 2 ವರ್ಷದೊಳಗಾಗಿ ಉಪಯೋಗಿಸತಕ್ಕದ್ದು ಮತ್ತು ಆ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ 1956ರ ಕಲಂ 3ರಲ್ಲಿ ಹೇಳಿರುವಂತೆ ಶೇ.51 ಪೇಡ್ ಆಫ್ ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಿತ ಅಥವಾ ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ/ ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
3. ಸದರಿ ಜಮೀನು ನಗರಾಭಿವೃದ್ಧಿ ಪ್ರಾಧಿಕಾರ ಸಿ.ಡಿ.ಪಿ/ಓಡಿ.ಪಿ ವ್ಯಾಪ್ತಿಯೊಳಗೆ ಬಂದರೆ ಅದರಂತೆ ಅನುಮತಿ ಪಡೆದು ಉಪಯೋಗಿಸತಕ್ಕದ್ದು
4. ಈ ಅನುಮತಿಯು ಕರ್ನಾಟಕ ಭೂಸುಧಾರಣೆ ಅಧಿನಿಯಮ 1961ರ ಕಲಂ 109ರನ್ವಯ ವಿನಾಯಿತಿ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.
5. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೋತ್ತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಕಲಂ 95ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯತಕ್ಕದ್ದು
6. ಸಂಸ್ಥೆ ನಡೆಸುವ ಚಟುವಟಿಕೆಗಳು ಸ್ಥಳೀಯ ಕಾನೂನು ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.
7. ಪ್ರಸ್ತಾಪಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಜಮೀನಿನ ವಿನ್ಯಾಸಕ್ಕೆ ನಗರ ಯೋಜನೆ ಇಲಾಖೆ/ಅಭಿವೃದ್ಧಿ ಪ್ರಾಧಿಕಾರ/ಸ್ಥಳೀಯ ಪ್ರಾಧಿಕಾರದಿಂದ ಅನುಮೋದನೆ ಪಡೆಯತಕ್ಕದ್ದು.
8. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯಾ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಜಮೀನನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಿಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಬಿ. ಚಿಕ್ಕರಾಜು**

ಪಿ.ಆರ್. 121

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ(ಭೂಸುಧಾರಣೆ)

## ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

### ಅಧಿಸೂಚನೆ

**ಅಪಜೀ 14 ಎಫ್ಎಫ್ 2006, ಬೆಂಗಳೂರು, ದಿನಾಂಕ: 19ನೇ ಜನವರಿ 2007.**

1963 ನೇ ಇಸವಿಯ ಕರ್ನಾಟಕ ಅರಣ್ಯ ಅಧಿನಿಯಮದ (1964 ನೇ ಇಸವಿಯ ಕರ್ನಾಟಕ ಅರಣ್ಯ ಅಧಿನಿಯಮದ 5) 4 ನೇ ಪ್ರಕರಣದ ನಿಯಮಗಳ ಮೇರೆಗೆ ಕರ್ನಾಟಕ ರಾಜ್ಯ ಸರ್ಕಾರದವರು ಈ ಮೂಲಕ:–

1) ಬೆಳಗಾವಿ ಜಿಲ್ಲೆ ಬೆಳಗಾವಿ ತಾಲ್ಲೂಕು ಹಂಗರಗೆ ಗ್ರಾಮದ ಜಮೀನನ್ನು ಇದಕ್ಕೆ ಲಗತ್ತಾಗಿರುವ ಅನುಸೂಚಿಯಲ್ಲಿ ಮೀರಿಸಲ್ಪಟ್ಟಿರುವ ಚಕ್ಕುಬಂದಿಯುಳ್ಳ ಪ್ರದೇಶವನ್ನು ಸದರಿ "ಮೀಸಲು ಅರಣ್ಯ" ವನ್ನಾಗಿ ಮಾರ್ಪಡಿಸಲು ಉದ್ದೇಶಿಸಿರುವುದಾಗಿ ಪ್ರಕಟಿಸಿದೆ.
2) ಮೇಲ್ಕಂಡ ಪ್ರಕರಣದ 1 (ಸಿ) ಕಲಂನ್ನನುಸರಿಸಿ ಕರ್ನಾಟಕ ರಾಜ್ಯ ಸರ್ಕಾರದವರು ಅಂತಹ ಜಿಲ್ಲೆಗಳಲ್ಲಿ ಅಡಗಿರುವ ಜಮೀನಿನಲ್ಲಿ ಅಥವಾ ಅದರ ಮೇಲೆ ಅಥವಾ ಅಂತಹ ಜಮೀನಿನ ಯಾವುದಾದರೂ ಅರಣ್ಯ ಉತ್ಪತ್ತಿಗೆ ಹಕ್ಕನ್ನು ತರುವ ಅಥವಾ ಹಕ್ಕಿದೆಯೆಂದು ಹೇಳುವ ಯಾವನಾದರೂ ಮನುಷ್ಯನಿಗೆ ಯಾವುದಾದರೂ ಹಕ್ಕುಗಳಿವೆಯೇ? ಅವುಗಳ ಸ್ವಭಾವವೇನು? ಮತ್ತು ಎಷ್ಟರ ಮಟ್ಟಿನವು ಎಂಬ ಅಂಶಗಳನ್ನು ವಿಚಾರಣೆ ಮಾಡಿ ನಿಶ್ಚಯಿಸಿ ಅವುಗಳ ವಿಷಯದಲ್ಲಿ ಮೇಲ್ಕಂಡ ಅಧಿವಿಯಮದ ಎರಡನೇಯ ಅಧ್ಯಾಯದಲ್ಲಿ ವಿಧಿಸಿರುವಂತೆ ಕ್ರಮ ನಡೆಸುವುದಕ್ಕೆ ಬೆಳಗಾವಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನಾಗಿ ನೇಮಿಸಿದೆ.
3) ಬೆಳಗಾವಿ ಅರಣ್ಯ ವಿಭಾಗಾಧಿಕಾರಿಗಳಾಗಿರುವವರು ಈ ವಿಚಾರಣೆಯಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳಿಗೆ ಸರ್ಕಾರದ ಪರವಾಗಿ ಸಹಾಯ ಮಾಡಲು ಹಾಜರಾಗಬೇಕೆಂದು ಸಹ ಸರ್ಕಾರವು ಆದೇಶಿಸಿದೆ.
4) ಮೇಲ್ಕಂಡ ಅಧಿನಿಯಮ 16 ನೇ ಕಲಂನಿಂದ ಕೊಡಲ್ಪಟ್ಟಿರುವ ಅಧಿಕಾರಗಳನ್ನು ಅನುಸರಿಸಿ ಕರ್ನಾಟಕ ರಾಜ್ಯ ಸರ್ಕಾರದವರು, ಕರ್ನಾಟಕ ರೆವಿನ್ಯೊ ಅಪಲೇಟ ಟ್ರಿಬುನಲ್ ಅರಣ್ಯ ವ್ಯವಸ್ಥಾಧಿಕಾರಿಗಳ, ಸದರಿ ಅಧಿನಿಯಮದ ಕಲಂ 11, 12 ಮತ್ತು 14 ನೇ ಪ್ರಕರಣಗಳನ್ನು ಅನುಸರಿಸಿ ಕೊಡುವ ಹುಕುಂಗಳ ಮೇಲೆ ಬರುವ ಅಪೀಲುಗಳನ್ನು ಪಡೆಯುವ ಅಧಿಕಾರವನ್ನು ಕೊಡಲಾಗಿದೆ. ಮತ್ತು
5) ಸದರಿ ಅಧಿನಿಯಮ 16 ನೇ ಪ್ರಕರಣದ 2 ನೇ ಕಲಂನ ಮೇರೆಗೆ ಯಾವುದಾದರೂ ಮನುಷ್ಯನಿಗೆ ಯಾವುದಾದರೂ ಹಕ್ಕುಗಳಿದ್ದರೆ, 15 ನೇ ಪ್ರಕರಣದ ಮೇರೆಗೆ ಕೊಡುವ ಹುಕುಂಗಳ ಮೇಲೆ ಹುಕುಂ ಕೊಟ್ಟ ತಾರೀಕಿನಿಂದ ಮೂರು ತಿಂಗಳೊಳಗಾಗಿ ಜಿಲ್ಲಾ ನ್ಯಾಯಲಯಕ್ಕೆ ಅಪೀಲು ಸಲ್ಲಿಸಬಹುದು.

**: ಅನೂಸೂಚಿ :**

| | | |
|---|---|---|
| ಜಿಲ್ಲೆಯ ಹೆಸರು | : | ಬೆಳಗಾವಿ |
| ತಾಲ್ಲೂಕಿನ ಹೆಸರು | : | ಬೆಳಗಾವಿ |
| ಹೋಬಳಿಯ ಹೆಸರು | : | ಉಚಗಾಂವ |
| ಗ್ರಾಮದ ಹೆಸರು | : | ಹಂಗರಗೆ |
| ಕ್ಷೇತ್ರದ ಸರ್ವೆ ನಂ. | : | 240 : 1 A/1 |
| ವಿಸ್ತೀರ್ಣ ಹೆಕ್ಟರುಗಳಲ್ಲಿ | : | 4.05 ಹೆ. (10.00 ಎಕರೆ) |
| ಕ್ಷೇತ್ರದ ಹೆಸರು | : | ಹಂಗರಗೆ ಅರಣ್ಯ |

**ಸೀಮಾ ವಿವರಣೆ**

**ಉತ್ತರ :** ಬೋಕನೂರು ಗ್ರಾಮದ ಗಡಿಯಲ್ಲಿ ಮೂಲೆ ಕಲ್ಲು 1 ನೇ ಕಲ್ಲಿನಿಂದ ಆರಂಭಗೊಂಡು ಉತ್ತರ ದಿಕ್ಕಿನಲ್ಲಿ ಪೋಲಿಸ್ ಫಾಯರಿಂಗ್ ರೇಂಜಿನ ಕ್ಷೇತ್ರದ ಮೂಲೆ ಕಲ್ಲು ಸಂಖ್ಯೆ 2 ನ್ನು ಸೇರುತ್ತದೆ.

| ಕಲ್ಲಿನಿಂದ | ಕಲ್ಲಿಗೆ | ಕೋನ (ಡಿಗ್ರಿಗಳಲ್ಲಿ) | ಅಂತರ (ಮೀಟರ್‌ಗಳಲ್ಲಿ) |
|---|---|---|---|
| 1 ನೇ ಕಲ್ಲಿನಿಂದ | 2 ನೇ ಕಲ್ಲಿಗೆ | 35 | 110 ಮೀಟರ್ |

**ಪೂರ್ವ:** ಸೀಮಾ ರೇಖೆಯು ಮೂಲೆ ಕಲ್ಲು ಸಂಖ್ಯೆ 2 ರಿಂದ ಪೂರ್ವ ದಿಕ್ಕಿನಲ್ಲಿ ಚಲಿಸಿ ಮೂಲೆ ಕಲ್ಲು ಸಂಖ್ಯೆ 4 ನ್ನು ಸೇರುತ್ತದೆ.

| ಕಲ್ಲಿನಿಂದ | ಕಲ್ಲಿಗೆ | ಕೋನ (ಡಿಗ್ರಿಗಳಲ್ಲಿ) | ಅಂತರ (ಮೀಟರ್‌ಗಳಲ್ಲಿ) |
|---|---|---|---|
| 2 ನೇ ಕಲ್ಲಿನಿಂದ | 3 ನೇ ಕಲ್ಲಿಗೆ | 106 | 140 ಮೀಟರ್ |
| 3 ನೇ ಕಲ್ಲಿನಿಂದ | 4 ನೇ ಕಲ್ಲಿಗೆ | 106 | 140 ಮೀಟರ್ |

**ದಕ್ಷಿಣ:** ಸೀಮಾ ರೇಖೆಯು ಪೂರ್ವದಲ್ಲಿ ಮೂಲೆ ಕಲ್ಲು ಸಂಖ್ಯೆ 4 ರಿಂದ ದಕ್ಷಿಣ ದಿಕ್ಕಿನಲ್ಲಿ ಚಲಿಸಿ ಮೂಲೆ ಕಲ್ಲು ಸಂಖ್ಯೆ 5 ನ್ನು ಸೇರುತ್ತದೆ.

| ಕಲ್ಲಿನಿಂದ | ಕಲ್ಲಿಗೆ | ಕೋನ (ಡಿಗ್ರಿಗಳಲ್ಲಿ) | ಅಂತರ (ಮೀಟರ್‌ಗಳಲ್ಲಿ) |
|---|---|---|---|
| 4 ನೇ ಕಲ್ಲಿನಿಂದ | 5 ನೇ ಕಲ್ಲಿಗೆ | 209 | 100 ಮೀಟರ್ |

**ಪಶ್ಚಿಮ:** ಸೀಮಾ ರೇಖೆಯು ದಕ್ಷಿಣ ದಿಕ್ಕಿನಲ್ಲಿ ಮೂಲೆ ಕಲ್ಲು ಸಂಖ್ಯೆ 5 ರಿಂದ ಪಶ್ಚಿಮ ದಿಕ್ಕಿನಲ್ಲಿ ಚಲಿಸಿ ಕಲ್ಲು ಸಂಖ್ಯೆ 6 ಹಾಗೂ ಬೋಕನೂರು ಗ್ರಾಮದ ಗಡಿಯಲ್ಲಿ ಸೀಮಾ ರೇಖೆಯು ಪ್ರಾರಂಭಗೊಂಡ ಮೂಲೆ ಕಲ್ಲು ಸಂಖ್ಯೆ 1 ನ್ನು ಸೇರುತ್ತದೆ.

| ಕಲ್ಲಿನಿಂದ | ಕಲ್ಲಿಗೆ | ಕೋನ (ಡಿಗ್ರಿಗಳಲ್ಲಿ) | ಅಂತರ (ಮೀಟರ್‌ಗಳಲ್ಲಿ) |
|---|---|---|---|
| 5 ನೇ ಕಲ್ಲಿನಿಂದ | 6 ನೇ ಕಲ್ಲಿಗೆ | 284 | 150 ಮೀಟರ್ |
| 6 ನೇ ಕಲ್ಲಿನಿಂದ | 1 ನೇ ಕಲ್ಲಿಗೆ | 284 | 150 ಮೀಟರ್ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ.ವಿ. ಜಯಲಕ್ಷ್ಮಿ**

ಪಿ.ಆರ್. 201

ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

**ಅಧಿಸೂಚನೆ**

**ಅಪಜೀ 23 ಎಫ್‌ಎಎಫ್ 2006, ಬೆಂಗಳೂರು, ದಿನಾಂಕ : 22ನೇ ಜನವರಿ 2007**

1963 ನೇ ಕರ್ನಾಟಕ ಅರಣ್ಯ ಅಧಿನಿಯಮ (1964 ನೇ ಕರ್ನಾಟಕ ಅರಣ್ಯ ಕಾಯ್ದೆ ಕಲಂ–5ರ) 17 ರಲ್ಲಿ ಪ್ರದತ್ತವಾಗಿರುವ ಅಧಿಕಾರದನ್ವಯ ಕರ್ನಾಟಕ ಸರ್ಕಾರದ ಉಧಾರ ಭಾವನೆಯ ಮೇರೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ ಎಫ್‌ಎಫ್‌ಡಿ 39 ಎಫ್‌ಎಫ್ 80 ದಿನಾಂಕ : 29–4–80 ರ ಪ್ರಕಾರ ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಜಮೀನುಗಳನ್ನು 22–01–2007ನೇ ದಿನಾಂಕದಿಂದ ಅನುಸೂಚಿಯಲ್ಲಿ ನಮೂದಿಸಿರುವ ಹಕ್ಕುಗಳ ಉಪಯೋಗಕ್ಕೆ ಒಳಪಟ್ಟು ಮೀಸಲು ಅರಣ್ಯವೆಂದು ಕರ್ನಾಟಕ ಸರ್ಕಾರವು ಕಾಯ್ದಿರಿಸಿದೆ ಎಂದು ಈ ಮೂಲಕ ಘೋಷಿಸಲಾಗಿದೆ.

**ಅನುಸೂಚಿ**

1) ಜಿಲ್ಲೆಯ ಹೆಸರು : ಶಿವಮೊಗ್ಗ
2) ತಾಲ್ಲೂಕಿನ ಹೆಸರು : ಭದ್ರಾವತಿ
3) ಹೋಬಳಿಯ ಹೆಸರು : ಕೂದಲಗೆರೆ
4) ಗ್ರಾಮದ ಹೆಸರು : ಬಸಲೀಕಟ್ಟೆ
5) ಸರ್ವೆ ನಂ. : 24
6) ವಿಸ್ತೀರ್ಣ : 56.00 ಎ.ಗುಂ. 22.67 ಹೆಕ್ಟೇರ್
7) ಬ್ಲಾಕಿನ ಹೆಸರು : ಬಸಲೀಕಟ್ಟೆ ಮೀಸಲು ಅರಣ್ಯ

**ಗಡಿ ವಿವರಣೆ**

**ಉತ್ತರ:–** ಸರ್ವೆ ರೇಖೆಯು ಸ್ಥಾನಸಂಖ್ಯೆ 6 ರಿಂದ ಪ್ರಾರಂಭಿಸುತ್ತದೆ. ಇದು ನಾಲೆಯ ಬಲ ದಂಡೆಯಲ್ಲಿ ಮತ್ತು ರಸ್ತೆ ಸೇತುವೆ ಮತ್ತು ನಾಲೆಯ ದಂಡೆಗಳು ಸೇರುವಲ್ಲಿ ಸ್ಥಿರವಾಗಿದೆ. ರೇಖೆಯು ಸ್ಥಾನಸಂಖ್ಯೆ 6 ರಿಂದ 7 ಕ್ಕೆ ಪೂರ್ವಾಭಿಮುಖವಾಗಿ ಸರ್ವೆ ನಂ. 24 ರಲ್ಲಿ 33 ಸರಪಳಿ ದೂರ ಗಾಡಿ ದಾರಿಯ ಮೇಲೆ ಸಾಗುತ್ತದೆ. ನಂತರ ರೇಖೆಯು ಸ್ಥಾನ ಸಂಖ್ಯೆ 7 ರಿಂದ 8ಕ್ಕೆ ಉತ್ತರಾಭಿಮುಖವಾಗಿ 41 ಸರಪಳಿ ದೂರ ಸಾಗುವುದು.

ಸ್ಥಾನದಿಂದ ಸ್ಥಾನಕ್ಕೆ ಇರುವ ಬೇರಿಂಗ್ ಮತ್ತು ದೂರ ಈ ಕೆಳಕಂಡಂತೆ ಇದೆ.

| ಸ್ಥಾನದಿಂದ | ಸ್ಥಾನಕ್ಕೆ | ಫೋರ್ ಬೇರಿಂಗ್(ಡಿಗ್ರಿಗಳಲ್ಲಿ) | ದೂರ(33 ಸರಪಳಿ) |
|---|---|---|---|
| 6 | 7 | 103.30 | 33.00 |
| 7 | 8 | 3.30 | 41.00 |

**ಪೂರ್ವ:–** ಗಡಿರೇಖೆಯು ಸ್ಥಾನಸಂಖ್ಯೆ 8 ರಿಂದ 1 ಕ್ಕೆ ಪ್ರಾರಂಭವಾಗಿ ದಕ್ಷಿಣ ಮತ್ತು ಆಗ್ನೇಯ ದಿಕ್ಕುಗಳ ನಡುವೆ ಸರ್ವೆ ನಂ. 24 ಮತ್ತು 8.16 ರ ಸಾಮಾನ್ಯ ಗಡಿಯ ಮೇಲೆ 107 ಸರಪಳಿ ದೂರ ಸಾಗಿ ಮತ್ತು ಸರ್ವೆ ನಂ. 24, 8, 16 ಮತ್ತು ನೇರಲಕೆರೆ ಗ್ರಾಮದ ಗಡಿಗಳು ಸಂದಿಸುವ ಕೂಡುಬಾಂದನ್ನು ಸೇರುವುದು.

| ಸ್ಥಾನದಿಂದ | ಸ್ಥಾನಕ್ಕೆ | ಫೋರ್ ಬೇರಿಂಗ್(ಡಿಗ್ರಿಗಳಲ್ಲಿ) | ದೂರ(33 ಸರಪಳಿ) |
|---|---|---|---|
| 8 | 1 | 153.00 | 107.00 |

**ದಕ್ಷಿಣ:–** ರೇಖೆಯು ಸ್ಥಾನಸಂಖ್ಯೆ 1 ರಿಂದ 2 ಕ್ಕೆ ಪಶ್ಚಿಮಾಭಿಮುಖವಾಗಿ ಸರ್ವೆ ನಂ. 24 ಮತ್ತು ನೇರಲೇಕೆರೆ ಗ್ರಾಮದ ಸಾಮಾನ್ಯ ಗಡಿಯ ಮೇಲೆ 62 ಸರಪಳಿ ದೂರ ಸಾಗಿ ಭದ್ರಾ ನಾಲೆಯನ್ನು ಮುಟ್ಟುತ್ತದೆ.

| ಸ್ಥಾನದಿಂದ | ಸ್ಥಾನಕ್ಕೆ | ಫೋರ್ ಬೇರಿಂಗ್(ಡಿಗ್ರಿಗಳಲ್ಲಿ) | ದೂರ(33 ಸರಪಳಿ) |
|---|---|---|---|
| 1 | 2 | 261 | 62 |

**ಪಶ್ಚಿಮ:–** ರೇಖೆಯು ಸ್ಥಾನಸಂಖ್ಯೆ 2 ರಿಂದ 3 ಕ್ಕೆ ಉತ್ತರಾಭಿಮುಖವಾಗಿ ಭದ್ರಾ ನಾಲೆಯ ಮೇಲೆ 17 ಸರಪಳಿ ದೂರ ಸಾಗಿ ಪುನ: ರೇಖೆಯು ಸ್ಥಾಸಂಖ್ಯೆ 3 ರಿಂದ 5 ಕ್ಕೆ ಸ್ಥಾನಸಂಖ್ಯೆ 4ರ ಮೂಲಕ ವಾಯುವ್ಯಾಭಿಮುಖವಾಗಿ 52 ಸರಪಳಿ ದೂರ ಸಾಗುತ್ತದೆ. ನಂತರ ರೇಖೆಯು ಮುಂದುವರಿದು ಸ್ಥಾನಸಂಖ್ಯೆ 5 ರಿಂದ 6 ಕ್ಕೆ ಉತ್ತರಾಭಿಮುಖವಾಗಿ ಗಾಡಿ ರಸ್ತೆಯನ್ನು ದಾಟಿ ಪ್ರಾರಂಭದ ಸ್ಥಾನಕ್ಕೆ 11 ಸರಪಳಿ ದೂರದಲ್ಲಿ ಸೇರುವುದು.

ಸ್ಥಾನದಿಂದ ಸ್ಥಾನಕ್ಕೆ ಇರುವ ಬೇರಿಂಗ್ ಮತ್ತು ದೂರ ಈ ಕೆಳಕಂಡಂತೆ ಇದೆ.

| ಸ್ಥಾನದಿಂದ | ಸ್ಥಾನಕ್ಕೆ | ಫೋರ್ ಬೇರಿಂಗ್(ಡಿಗ್ರಿಗಳಲ್ಲಿ) | ದೂರ(33 ಸರಪಳಿ) |
|---|---|---|---|
| 2 | 3 | 4.00 | 17.00 |
| 3 | 4 | 325.00 | 9.00 |
| 4 | 5 | 332.00 | 43.00 |
| 5 | 6 | 10.00 | 11.00 |

**ದಾರಿಯ ಹಕ್ಕುಗಳು**

ಗಾಡಿ ರಸ್ತೆಯು ಮೀಸಲು ಅರಣ್ಯ ಪ್ರದೇಶದಲ್ಲಿ ಹಾದು ಬಸಲೀಕಟ್ಟೆಯಿಂದ ಅರಣ್ಯ ಪ್ರದೇಶಕ್ಕೆ ಪೂರ್ವ ದಿಕ್ಕಿನಲ್ಲಿ ಭದ್ರಾ ನಾಲೆ ಸೇತುವೆಯ ಮೂಲಕ ಹಾದು ಹೋಗುತ್ತದೆ.

**ಇತರೆ ಸವಲತ್ತುಗಳು**

1) ಉಚಿತವಾಗಿ ಗ್ರಾಮಸ್ಥರು ತಮ್ಮ ಜಾನುವಾರುಗಳಿಗೆ ಹುಲ್ಲು ಮೇಯಿಸಬಹುದಾಗಿದೆ.
2) ಉಚಿತವಾಗಿ ಗ್ರಾಮಸ್ಥರು ಹಸಿರು ಎಲೆಗೊಬ್ಬರವನ್ನು ನಂಬಿಕೆ ಅರ್ಹ ಉದ್ದೇಶಕ್ಕಾಗಿ ಆಯ್ದುಕೊಳ್ಳಬಹುದಾಗಿದೆ.

3) ಉಚಿತವಾಗಿ ಗ್ರಾಮಸ್ಥರು ಒಣ ಉರುವಲು ಸೌದೆಗಳ ಅರ್ಹ ಉದ್ದೇಶಕ್ಕಾಗಿ ಆಯ್ದುಕೊಳ್ಳಬಹುದಾಗಿದೆ.

4) ಉಚಿತವಾಗಿ ಗ್ರಾಮಸ್ಥರು ಮುಳೀ ಹುಲ್ಲನ್ನು ನಂಬಿಕೆ ಅರ್ಹ ಉದ್ದೇಶಕ್ಕಾಗಿ ಆಯ್ದುಕೊಳ್ಳಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ.ವಿ.ಜಯಲಕ್ಷ್ಮಿ**

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಪಿ.ರ್. 202

**ಅಧಿಸೂಚನೆ**

**ಅಪಜೀ 27 ಎಫ್ಎಎಫ್ 2006, ಬೆಂಗಳೂರು, ದಿನಾಂಕ: 22ನೇ ಜನವರಿ 2007**

1963ನೇ ಇಸವಿಯ ಕರ್ನಾಟಕ ಅರಣ್ಯ ಅಧಿನಿಯಮದ (1964ನೇ ಇಸವಿಯ ಕರ್ನಾಟಕ ಅರಣ್ಯ ಅಧಿನಿಯಮ–5) 4ನೇ ಪ್ರಕರಣದ ನಿಯಮಗಳ ಮೇರೆಗೆ ಕರ್ನಾಟಕ ರಾಜ್ಯ ಸರ್ಕಾರವು ಈ ಮೂಲಕ :–

1. ಕೋಲಾರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಹೊಸೂರು ಹೋಬಳಿ, ಹೊಸೂರು ಗ್ರಾಮದ ಜಮೀನನ್ನು ಇದಕ್ಕೆ ಲಗತ್ತಾಗಿರುವ ಅನುಸೂಚಿಯಲ್ಲಿ ವಿವರಿಸಲ್ಪಟ್ಟಿರುವ ಚಕ್ಕುಬಂದಿಯುಳ್ಳ ಪ್ರದೇಶವನ್ನು "ಮೀಸಲು ಅರಣ್ಯ"ವನ್ನಾಗಿ ಘೋಷಿಸಲು ಉದ್ದೇಶಿಸಿದೆ.
2. ಮೇಲ್ಕಂಡ ಪ್ರಕರಣದ 1(ಸಿ) ಕಲಂನ್ನನುಸರಿಸಿ ಕರ್ನಾಟಕ ರಾಜ್ಯ ಸರ್ಕಾರದವರು ಅಂತಹ ಎಲ್ಲೆಗಳ ಒಳಗಿರುವ ಜಮೀನಿನಲ್ಲಿ ಅಥವಾ ಅದರ ಮೇಲೆ ಅಥವಾ ಅಂತಹ ಜಮೀನಿನ ಯಾವುದಾದರೂ ಅರಣ್ಯ ಉತ್ಪತ್ತಿಗೆ ಹಕ್ಕು ಬಾದ್ಯತೆ ಇರುವ ಅಥವಾ ಹಕ್ಕು ಬಾದ್ಯತೆ ಇದೆ ಎಂದು ಹೇಳುವ ಯಾವ ವ್ಯಕ್ತಿಗಾದರೂ ಯಾವುದಾದರೂ, ಹಕ್ಕು ಬಾದ್ಯತೆಗಳಿವೆಯೇ? ಅವುಗಳ ಸ್ವಭಾವವೇನು? ಮತ್ತು ಅರಣ್ಯ ವ್ಯವಸ್ಥಾಪನಾಧಿಕಾರಿಗಳು, ಎಷ್ಟರಮಟ್ಟಿನವು ಎಂಬ ಅಂಶಗಳನ್ನು ವಿಚಾರಣೆ ಮಾಡಿ, ನಿಶ್ಚಯಿಸಿ ಅವುಗಳ ವಿಷಯದಲ್ಲಿ ಮೇಲ್ಕಂಡ ಅಧಿನಿಯಮದ ಎರಡನೇ ಅಧ್ಯಾಯದಲ್ಲಿ ವಿಧಿಸಿರುವಂತೆ ಕ್ರಮ ನಡೆಸುವುದಕ್ಕೆ ಕೋಲಾರ ಉಪ ವಿಭಾಗದ ಸಹಾಯದ ಆಯುಕ್ತರು (ಅಸಿಸ್ಟೆಂಟ್ ಕಮೀಷನರ್)ರವರನ್ನು ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಅಧಿಸೂಚನೆಯಾದ ದಿನಾಂಕದಿಂದ ಒಂದು ವರ್ಷದೊಳಗೆ ಪ್ರದೇಶದ ಹಕ್ಕು ಬಾದ್ಯತೆಯನ್ನು ಇತ್ಯರ್ಥಗೊಳಿಸುವುದು.
3. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೋಲಾರ ವಿಭಾಗ, ಕೋಲಾರರವರಿಗೆ ಈ ವಿಚಾರಣೆಯಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳಿಗೆ ಸರ್ಕಾರದ ಪರವಾಗಿ ಸಹಾಯ ಮಾಡಲು ಹಾಜರಾಗಬೇಕೆಂದು ಸರ್ಕಾರವು ಆದೇಶಿಸುತ್ತದೆ ಮತ್ತು ಅಧಿಸೂಚನೆಯಲ್ಲಿ ತಿಳಿಸಿರುವ ಪ್ರದೇಶವನ್ನು ಒತ್ತುವರಿಯಾಗದಂತೆ ರಕ್ಷಣೆ ಮಾಡುವುದು.
4. ಮೇಲ್ಕಂಡ ಅಧಿನಿಯಮ 11, 12 ಮತ್ತು 14ನೇ ಪ್ರಕರಣಗಳ ಪ್ರಕಾರ ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಯಾವುದೇ ಆದೇಶ ಹೊರಡಿಸಿದ ದಿನಾಂಕದಿಂದ 3 ತಿಂಗಳೊಳಗೆ ಬಾಧಿತವಾದ ವ್ಯಕ್ತಿಗಳು ಸಲ್ಲಿಸಿದ ಮೇಲ್ಮನವಿಗಳನ್ನು ಪರಿಶೀಲಿಸಲು ಸದರಿ ಅಧಿನಿಯಮ ಪ್ರಕರಣ 16 (1)ನೇ ಪ್ರಕಾರ ಕರ್ನಾಟಕ ಅಪಲೇಟ್ ಟ್ರಿಬ್ಯೂನಲ್ ನ್ಯಾಯ ಮಂಡಲಿಗೆ ಅಧಿಕಾರವಿರುತ್ತದೆ.
5. ಮೇಲ್ಕಂಡ ಅಧಿನಿಯಮ 15ನೇ ಪ್ರಕರಣದ ಪ್ರಕಾರ ಭಾದಿತವಾದ ಯಾವುದೇ ವ್ಯಕ್ತಿಯು ಸದರಿ ಅಧಿನಿಯಮದ ಪ್ರಕರಣ 16 (2)ನೇ ಪ್ರಕಾರ ಆದೇಶ ಹೊರಡಿಸಿದ ದಿನಾಂಕದಿಂದ 3 ತಿಂಗಳೊಳಗೆ ಜಿಲ್ಲಾ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬಹುದು.

**ಅನುಸೂಚಿ**

| | | | |
|---|---|---|---|
| ಜಿಲ್ಲೆಯ ಹೆಸರು | : | ಕೋಲಾರ | |
| ತಾಲ್ಲೂಕಿನ ಹೆಸರು | : | ಗೌರಿಬಿದನೂರು | |
| ಹೋಬಳಿಯ ಹೆಸರು | : | ಹೊಸೂರು. | |
| ಗ್ರಾಮದ ಹೆಸರು | : | ಬಿಸಿಲಹಳ್ಳಿ. | |
